Swabhimani Sahakari
Pages : 34 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 06
June - 2023

## ಶ್ರೀ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನೂತನ ಸರ್ಕಾರ ಅಸ್ತಿತ್ವಕ್ಕೆ



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು

**ಶ್ರೀ ಕೆ.ಎನ್. ರಾಜಣ್ಣ**
ಮಾನ್ಯ ಸಹಕಾರ ಸಚಿವರು

**ಶ್ರೀ ಡಿ.ಕೆ.ಶಿವಕುಮಾರ್**
ಮಾನ್ಯ ಉಪಮುಖ್ಯಮಂತ್ರಿಗಳು

ನೂತನವಾಗಿ ಅಧಿಕಾರ ಸ್ವೀಕರಿಸಿರುವ
ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮ್ಮಯ್ಯ, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ
ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣ ಅವರಿಗೆ ರಾಜ್ಯದ ಸಮಸ್ತ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ವತಿಯಿಂದ
ಹಾರ್ದಿಕ ಶುಭಾಶಯಗಳನ್ನು ಕೋರುತ್ತೇವೆ.



ಜಿ ನಂಜನಗೌಡ
ಅಧ್ಯಕ್ಷರು



ಎ.ಆರ್. ಪ್ರಸನ್ನಕುಮಾರ್
ಉಪಾಧ್ಯಕ್ಷರು



ಶರಣಗೌಡ ಜಿ. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು




ವಿಶ್ವ ಪರಿಸರ ದಿನಾಚರಣೆ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5939

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1632



ಜಿ. ನಂಜನಗೌಡ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನಮಸ್ಕಾರಗಳು, ಕರ್ನಾಟಕ ರಾಜ್ಯದ ವಿಧಾನ ಸಭೆಯ ಚುನಾವಣೆ ದಿನಾಂಕ 10 ಮೇ ರಂದು ನಡೆದು ದಿನಾಂಕ 13 ರಂದು ಫಲಿತಾಂಶ ಬಂದಿರುವುದು ತಮಗೆಲ್ಲ ತಿಳಿದಿದೆ. ನೂತನ ಸರಕಾರ ದಿನಾಂಕ 20 ಮೇ ರಂದು ಅಸ್ತಿತ್ವಕ್ಕೆ ಬಂದಿದೆ. ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿ ಹಾಗೂ ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರರವರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸನ್ಮಾನ್ಯ ಶ್ರೀ ಕೆ.ಎನ್ ರಾಜಣ್ಣರವರು ಸಹಕಾರ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಹಲವು ಹಿರಿಯ ಸಹಾರಿ ಧುರೀಣರಿಗೆ ಶಾಸಕರಾಗಿ ಪುನರಾಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

## ಕರ್ನಾಟಕ ಸರಕಾರದ ನೂತನ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಂತ್ರಿಮಂಡಳದ ಎಲ್ಲ ಸಚಿವರಿಗೆ ಹಾಗೂ ಎಲ್ಲ ನೂತನ ಶಾಸಕರಿಗೆ ಸೌಹಾರ್ದ ಸಹಕಾರಿ ಕ್ಷೇತ್ರ ಹಾಗೂ ಸಂಯುಕ್ತ ಸಹಕಾರಿಯ ಅಭಿನಂದನೆಗಳು. ಸಹಕಾರ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗಾಗಿ ಸರ್ಕಾರದ ಸಚಿವರ ಹಾಗೂ ಶಾಸಕರ ಪ್ರೋತ್ಸಾಹ ಹಾಗೂ ಬೆಂಬಲ ನಿರೀಕ್ಷೆ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನಮಸ್ಕಾರಗಳು, ಕರ್ನಾಟಕ ರಾಜ್ಯದ ವಿಧಾನ ಸಭೆಯ ಚುನಾವಣೆ ದಿನಾಂಕ 10 ಮೇ ರಂದು ನಡೆದು ದಿನಾಂಕ 13 ಮೇ ರಂದು ಫಲಿತಾಂಶ ಬಂದಿರುವುದು ತಮಗೆಲ್ಲ ತಿಳಿದಿದೆ. ನೂತನ ಸರಕಾರ ದಿನಾಂಕ 20 ಮೇ ರಂದು ಅಸ್ತಿತ್ವಕ್ಕೆ ಬಂದಿದೆ. ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿ ಹಾಗೂ ಸನ್ಮಾನ್ಯ ಶ್ರೀ ಡಿ. ಕೆ. ಶಿವಕುಮಾರರವರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸನ್ಮಾನ್ಯ ಶ್ರೀ ಕೆ.ಎನ್ ರಾಜಣ್ಣರವರು ಸಹಕಾರ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಹಲವು ಹಿರಿಯ ಸಹಕಾರಿ ಧುರೀಣರಿಗೆ ಶಾಸಕರಾಗಿ ಪುನರಾಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದ ಎಲ್ಲ ಸಹಕಾರಿಗಳ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕ ವಿಧಾನ ಸಭೆಗೆ ಚುನಾಯಿತರಾದ 224 ಶಾಸಕರಲ್ಲಿ 61 ಶಾಸಕರು ವಿವಿಧ ಪಕ್ಷಗಳಿಂದ ಪ್ರಥಮ ಬಾರಿಗೆ ಆಯ್ಕೆಯಾಗಿದ್ದಾರೆ. ಕೆಲವರು 2, 3 ಹಾಗೂ ಹಲವು ಬಾರಿ ಆಯ್ಕೆಯಾದವರಿದ್ದಾರೆ.

ರಾಜ್ಯದ ನೂತನವಾಗಿ ಚುನಾಯಿತರಾದ ಶಾಸಕರಲ್ಲಿ 35ಕ್ಕಿಂತಲೂ ಹೆಚ್ಚು ಶಾಸಕರು ಸಮಗ್ರ ಸಹಕಾರಿ ಕ್ಷೇತ್ರದ ಜೊತೆಗೆ ನಿಕಟ ಸಂಪರ್ಕ ಹೊಂದಿದವರಾಗಿದ್ದಾರೆ. ಅದರಲ್ಲಿ 20ಕ್ಕೂ ಹೆಚ್ಚು ಶಾಸಕರು ಸೌಹಾರ್ದ ಸಹಕಾರಿಗಳಾಗಿರುವುದು ಈ ಬಾರಿಯ ವಿಶೇಷವಾಗಿದೆ.

ಶಾಸಕರ ವ್ಯಾಪ್ತಿಯ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳು ಸಾಧನೆಗಳು ಕ್ರೀಯಾಯೋಜನೆಗಳು ಅಗತ್ಯವಾದ ನೆರವು ಹಾಗೂ ಪ್ರೋತ್ಸಾಹದ ಜೊತೆಗೆ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ಸುಸ್ಥಿರ ಅಭಿವೃದ್ಧಿಯ ವಾತಾವರಣ ಸೃಷ್ಟಿಸುವಲ್ಲಿ ಸಹಕಾರಿಗಳು ಮುಂದಾಗಬೇಕು. ನೂತನ ಸರಕಾರ, ಮಾನ್ಯ ಮುಖ್ಯ ಮಂತ್ರಿಗಳು, ಸಹಕಾರ ಸಚಿವರು ಮತ್ತು ಎಲ್ಲಾ ಶಾಸಕರುಗಳ ಸಹಕಾರ ಮತ್ತು ಪ್ರೋತ್ಸಾಹದಿಂದ ಸಹಕಾರ ರಥವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವಲ್ಲಿ ಎಲ್ಲಾ ಸಹಕಾರಿಗಳ ಸಂಪೂರ್ಣ ಸಹಕಾರವನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................... 2
ಸಂಪಾದಕೀಯ........................................... 3
ಜ್ಞಾನ ಜ್ಯೋತಿ........................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–06, 09–28
**ಲೇಖನಗಳು :**
ಸಹಕಾರಿ ಅಸ್ಮಿತೆ (Cooperative Identity) ಅಗತ್ಯತೆ – ಸಹಕಾರಿಗಳ ಜವಾಬ್ದಾರಿ.....29–30
ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ – ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು ............................ 31–32
ಪತ್ತಿನ ಚಟುವಟಿಕೆ ನಡೆಸುವ ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ಕಡಿತಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಮಹತ್ವದ ತೀರ್ಪು ............................................. 33

# ಸಂಪಾದಕೀಯ

## ಆದಾಯ ತೆರಿಗೆ : ಸುಪ್ರೀಮ್ ಕೋರ್ಟ ಸ್ವಾಗತಾರ್ಹ ತೀರ್ಪು : ಕ್ರೆಡಿಟ್ ಸಹಕಾರಿ ಸಂಸ್ಥೆಗಳು ನಿರಾಳ. ಸಹಕಾರಿಗಳಿಗೆ ಹರ್ಷ

ಕಳೆದ ಹಲವಾರು ವರ್ಷಗಳಿಂದ ದೇಶದ ಕ್ರೆಡಿಟ್ ಸಹಕಾರ ಸಂಘಗಳು ಆದಾಯ ತೆರಿಗೆ ಕಾಯ್ದೆ 80 (ಪಿ) (2) ಅಡಿಯಲ್ಲಿ ವಿನಾಯಿತಿ ನೀಡಬೇಕೆಂದು ಕೇಳುತ್ತಲೆ ಇದ್ದು ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವರಿಗೆ ಸಿ.ಬಿ.ಡಿ.ಟಿ. ಚೇರಮನ್‌ರಿಗೆ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಈಗಿನ ಕೇಂದ್ರ ಸಹಕಾರ ಸಚಿವರಿಗೆ ಹಲವಾರು ಬಾರಿ ಮನವಿಗಳನ್ನು ಸಲ್ಲಿಸಲಾಗಿತ್ತು. ಈ ಮನವಿಗಳಿಗೆ ಪರಿಶೀಲಿಸಲಾಗುವುದು ಎಂಬ ಭರವಸೆ ನೀಡಲಾಗಿತ್ತು. ರಾಜ್ಯದಲ್ಲಿ ಅನೇಕ ಸಭೆ ಸಮಾರಂಭಗಳಲ್ಲಿ, ರಾಷ್ಟ್ರಮಟ್ಟದ ಕಾರ್ಯಾಗಾರಗಳಲ್ಲಿ ಸೆಮಿನಾರಗಳಲ್ಲಿ, ಸಮ್ಮೇಳನ ಸಮಾವೇಶಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆದು ನಡಾವಳಿಗಳನ್ನು ಕೇಂದ್ರ ಹಣಕಾಸು ಸಚಿವರಿಗೆ ಕಳುಹಿಸಲಾಗಿತ್ತು.

ಈ ಎಲ್ಲ ವಿದ್ಯಮಾನಗಳು ನಡೆಯುತ್ತಿದ್ದರೂ ಆದಾಯ ತೆರಿಗೆ ಅಧಿಕಾರಿಗಳು ಕ್ರೆಡಿಟ್ ಸಹಕಾರ ಸಂಘಗಳಿಗೆ ವಿಶೇಷವಾಗಿ ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡುವುದು, ಹೆಚ್ಚುವರಿ ಮಾಹಿತಿಗಳನ್ನು ಕೇಳುವುದು ಮುಂತಾದ ಪತ್ರ/ನೋಟೀಸ್ ನೀಡುತ್ತ ಬಂದಿದ್ದರು. ಈ ಬಗ್ಗೆ ಕ್ರೆಡಿಟ್ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಸಂಘಗಳ ಕೋರ್ಟ್‌ಗಳಿಗೆ ಹೋಗಿ ಪರಿಹಾರ ಕಂಡುಕೊಂಡಿದ್ದಾಗ್ಯೂ ಸಹ ಮತ್ತೆ ಮತ್ತೆ ಬೇರೆ ಕಾರಣಗಳನ್ನು ಹುಡುಕಿ ಆದಾಯ ತೆರಿಗೆ ಪಾವತಿಸುವಂತೆ ನೋಟೀಸ್ ನೀಡುತ್ತಿರುವುದರ ಹಿನ್ನೆಲೆಯಲ್ಲಿ ಹಲವಾರು ಸಹಕಾರ ಸಂಘಗಳು ಆದಾಯ ತೆರಿಗೆ ಇಲಾಖೆಯ ವಿರುದ್ಧ ಕೋರ್ಟನಲ್ಲಿ ಕೇಸ್ ದಾಖಲಿಸಿದ್ದರು.

ಈ ಬಗ್ಗೆ ಆದಾಯ ತೆರಿಗೆ ಪ್ರಿನ್ಸಿಪಾಲ್ ಕಮಿಶನರ್‌ರವರು ಸುಪ್ರೀಮ್ ಕೋರ್ಟನಲ್ಲಿ ಮಾಡಿದ ಅಪೀಲ್ ನಂ 8719/2022 ನಲ್ಲಿ ಮಹತ್ವದ ತೀರ್ಪು ನೀಡಿ ಕ್ರೆಡಿಟ್ ಸಹಕಾರ ಸಂಘಗಳು ಸಹಕಾರಿ ಬ್ಯಾಂಕುಗಳಲ್ಲ. ಈ ಸಂಸ್ಥೆಗಳು ತಮ್ಮ ಸದಸ್ಯರ ಸೇವೆ ಮಾಡುವುದರ ಜೊತೆಗೆ ಹಣಕಾಸಿನ ವ್ಯವಹಾರಗಳನ್ನು ಮಾಡುತ್ತಾರೆ. ಹಾಗೆಂದ ಮಾತ್ರಕ್ಕೆ ಅವುಗಳನ್ನು ಬ್ಯಾಂಕುಗಳಾಗಿ ವರ್ಗೀಕರಿಸಲಾಗುವುದಿಲ್ಲ. ಅವರುಗಳು ಕ್ರೆಡಿಟ್ ಸಹಕಾರ ಸಂಘಗಳು ಮಾತ್ರ. ಅವರುಗಳು ಆದಾಯ ತೆರಿಗೆ ಕಾಯ್ದೆ 80(ಪಿ)(2) ಅಡಿಯಲ್ಲಿ ವಿನಾಯಿತಿ ಪಡೆಯಲು ಅರ್ಹರಾಗಿದ್ದಾರೆ ಎಂದು ತೀರ್ಪು ನೀಡಿರುವುದು ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ನಿರಾಳವಾದಂತಾಗಿದೆ. ಕೇಂದ್ರ ಸಹಕಾರ ಸಚಿವಾಲಯವೂ ಕೂಡ ಈ ತೀರ್ಪಿನ್ನು ಸ್ವಾಗತಿಸಿ ಇದೊಂದು ಮಹತ್ವದ ತೀರ್ಪು ಎಂದು ಹೇಳಿದೆ.

ಸಹಕಾರಿ ಸಂಘಗಳು ತಮ್ಮ ಸದಸ್ಯರ ಜೊತೆಗಿನ ವ್ಯವಹಾರದ ಆಧಾರದ ಮೇಲೆ ಗಳಿಸುವ ಲಾಭದ ಮೇಲೆ ಈ ಆದಾಯ ತೆರಿಗೆಯನ್ನು ಪಾವತಿಸಲು ಇಲಾಖೆಯವರು ಸೂಚಿಸುತ್ತಿದ್ದರು. ಆದರೆ ಇತ್ತೀಚಿನ ಕೆಲವು ಪ್ರಕರಣಗಳಲ್ಲಿ ಆದಾಯ ತೆರಿಗೆ ಇಲಾಖೆಯಿಂದ ನಿರಂತರವಾಗಿ ತೆರಿಗೆ ಪಾವತಿಗೆ ನೋಟೀಸ್/ ಬೇಡಿಕೆ ಪತ್ರಗಳು ಕೊಡುತ್ತಿದ್ದರು. ಇದೊಂದು ಮಹತ್ವದ ತೀರ್ಪು. ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಪೂರಕವಾಗಿದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

# "ನಮ್ಮ ಗುರಿ – ನಮ್ಮ ಗಮ್ಯ"

ನಮ್ಮ ಇಚ್ಛೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ನಾವು ಸಾಧನೆ ಮಾಡುತ್ತೇವೆ. ಈ ಇಚ್ಛೆಗಳಲ್ಲಿ ಲೌಕಿಕ, ಯೌಗಿಕ ಹಾಗೂ ಪಾರಮಾರ್ಥಿಕ ಎಂಬ ಮೂರು ಪ್ರಕಾರಗಳಿವೆ. ಜೀವನದಲ್ಲಿ ಬಹಳಷ್ಟು ಬಯಕೆಗಳು ಇರುತ್ತವೆ. ಅವೆಲ್ಲವುಗಳ ಈಡೇರಿಕೆಗಾಗಿ ಜೀವನದ ಬಹಳಷ್ಟು ಕಾಲ ಪ್ರಯತ್ತಿಸುತ್ತೇವೆ. ಒಮ್ಮೆ ಆ ಬಯಕೆ ಈಡೇರಿದರೆ ಬಹಳಷ್ಟು ಸಂತಸಪಡುತ್ತೇವೆ. ಸ್ವಂತ ಮನೆಯಲ್ಲಿ ವಾಸಿಸುವುದು ಒಂದು ಬಯಕೆ, ಅಲ್ಲಿ ಪರತಂತ್ರ ಭಾವನೆ ಇರುವುದಿಲ್ಲ. ಮನುಷ್ಯ ಆರಾಮ ಇರಬಹುದು. ಬಡಮನುಷ್ಯನಿಗೆ ಮನೆ ಕಟ್ಟುವುದೇ ಜೀವನದ ಪರಮಾರ್ಥ. ಹಲವಾರು ವರ್ಷ ದುಡಿದು ಗಳಿಸಿ, ಗಳಿಸಿದ ಸಂಪತ್ತನ್ನು ಉಳಿಸಿ ಒಂದು ಚಿಕ್ಕ ಮನೆ ಕಟ್ಟಿದರೆ ಅವನಿಗೆ ಜೀವನ ಸಾರ್ಥಕ ಎನಿಸುತ್ತದೆ. ಇದೇ ಭೌತಿಕ ಸಿದ್ಧಿ. ಆ ದಿವಸ ಆ ಮನುಷ್ಯ ತನ್ನ ಮನೆಯಲ್ಲಿ ಸುಖ ನಿದ್ರೆ ಮಾಡುತ್ತಾನೆ. 'ಗತಿ' ಇದು ಮನುಷ್ಯನಿಗೆ ಸುಖ–ಶಾಂತಿ ಕೊಡುತ್ತದೆ. ಕನಸುಗಳನ್ನು ಈಡೇ–ರಿಸುವುದಕ್ಕಾಗಿ ತನ್ನ ಆಯುಷ್ಯ ಬುದ್ಧಿ, ಶ್ರಮಗಳನ್ನು ಒತ್ತೆಯಿಡುತ್ತೇನೆ. ಇದನ್ನೇ ತಪಸ್ಸು ಎನ್ನುವರು. ಇದಕ್ಕಾಗಿ ಮನುಷ್ಯ ಕಷ್ಟಪಡಬೇಕಾಗುತ್ತದೆ. ತಪಸ್ಸಿನಿಂದಲೇ ಕನಸು ಕೈಗೂಡುತ್ತದೆ. ಒಂದು ಉದ್ದೇಶಕ್ಕಾಗಿ ಕಷ್ಟಪಡುವುದೇ ತಪಸ್ಸು. ಕಷ್ಟ ಇರದಿದ್ದರೆ ಫಲ ಇರುವುದಿಲ್ಲ. ಕನಸು ಈಡೇರುವುದಿಲ್ಲ. ಕನಸುಗಳು ಬೇರೆ ಬೇರೆ ಇರಬಹುದು ಆದರೆ ತಪಸ್ಸು ಒಂದೇ.

ಗುರಿಗಳಲ್ಲಿ ಮೂರು ಪ್ರಕಾರಗಳಿವೆ. ಲೌಕಿಕ, ಯೌಗಿಕ ಹಾಗೂ ಪಾರಮಾರ್ಥಿಕ ಲೋಕದಲ್ಲಿ ಪಡೆಯುವುದೇ ಲೌಕಿಕ ಸಿದ್ದಿ, ಅದಕ್ಕಾಗಿ ಮಾಡುವ ತಪಸ್ಸು ಲೌಕಿಕ ತಪಸ್ಸು, ಬೀಜ ಬಿತ್ತದೆ, ನೀರು ಹಾಕದೆ, ರಕ್ಷಣೆ ಕೊಡದೆ ಬೆಳೆಯನ್ನು ನಿರೀಕ್ಷಿಸಬಾರದು. ಬದುಕನ್ನು ಕಟ್ಟಬೇಕಾದರೆ ಪರಿಶ್ರಮಬೇಕು. ಒಂದು ಸಸಿ ಒಂದೇ ದಿನದಲ್ಲಿ ಗಿಡವಾಗುವುದಿಲ್ಲ. ನಿಸರ್ಗ ವರ್ಷಗಟ್ಟಲೇ ಅದಕ್ಕಾಗಿ ತಪಸ್ಸು ಮಾಡುತ್ತದೆ. ಇದೇ ರೀತಿ ಮನುಷ್ಯ ಕೂಡ ತಪಸ್ಸು ಮಾಡಬೇಕು.

ಒಂದೂರಿನಲ್ಲಿ ಒಬ್ಬ ಮುದುಕ ಇದ್ದ, ಅವನು ಸುಮಾರು ಇಪ್ಪತ್ತೈದು ವಷಗಳಿಂದ ಒಂದು ಗಿಡವನ್ನು ಬೆಳೆಸುತ್ತಿದ್ದ, ಅವನ ಪರಿಶ್ರಮದ ಫಲವಾಗಿ ಅದು ಒಂದು ಹೆಮ್ಮರವಾಗಿ ಬೆಳೆದಿತ್ತು. ಅದೊಂದು ಅಪರೂಪದ ಗಿಡ. ಇನ್ನೊಂದು ಐದಾರು ತಿಂಗಳಲ್ಲಿ ಆ ಗಿಡ ಬಿಟ್ಟ ಹೂವುಗಳು ಹಣ್ಣಾಗುವ ಕಾಲ ಬಂದಿತ್ತು. ಆದರೆ ಒಂದು ರಾತ್ರಿ ಭಯಾನಕ ಚಂಡಮಾರುತ ಬೀಸಿ, ಇಡೀ ನಿಸರ್ಗವೇ ಹೊಯ್ದಾಡಿತು. ಮನೆಯೊಳಗೆ ಮಲಗಿದ್ದ ಮುದುಕನಿಗಿದು ಗೊತ್ತಿರಲಿಲ್ಲ. ಅವನು ಒಂದು ಕನಸು ಕಂಡ. ಆ ಅಪರೂಪದ ಗಿಡದ ಫಲಗಳನ್ನು ಮಾರಿ ಕೋಟ್ಯಾಧೀಶನಾದಂತೆ ಕನಸು ಕಂಡ. ಆದರೆ ಬೆಳಿಗ್ಗೆ ಎದ್ದು ಕಣ್ಣು ಬಿಟ್ಟು ನೋಡಿದಾಗ ಗಿಡ ಕೆಳಗೆ ಬಿದ್ದಿತ್ತು. ಮುದಕನ ಕನಸು ಮುರಿದಿತ್ತು. ನಿಸರ್ಗದಿಂದಾಗಿ ಲೌಕಿಕ ಕನಸುಗಳು ಯಾವಾಗ ಒಡೆಯುತ್ತವೆ. ಎಂದು ಹೇಳಲು ಬರುವುದಿಲ್ಲ.

ಕನಸಿನಲ್ಲಿ ಎರಡು ಪ್ರಕಾರಗಳಿವೆ – ಸಾಧಕ ಹಾಗೂ ಬಾಧಕ, ಯಾವುದು ಸಾಧಕವೋ ಅದು ಜೀವನಕ್ಕೆ ವಿಕಾಸ ಒದಗಿಸುತ್ತದೆ. ನೆಮ್ಮದಿ ತಂದುಕೊಡುತ್ತದೆ ಜೀವನಕ್ಕೆ ವಿಕಾಸ ಒದಗಿಸುತ್ತದೆ. ನೆಮ್ಮದಿ ತಂದುಕೊಡುತ್ತದೆ. ಜೀವನಕ್ಕೆ ಉತ್ಸಾಹ ಒದಗಿಸುವ, ಪ್ರೇರಣೆ, ಒದಗಿಸುವ ಕನಸುಗಳು ಇರಬೇಕು. ಯಾವಾಗ ನಮಗೆ ಬೇಕಾಗಿರುತ್ತದೆಯೋ ಆಗ ಎಷ್ಟು ದುಡಿದರೂ ಬೇಸರ ಬರುವುದಿಲ್ಲ. ಅದೇ ರೀತಿ ಕನಸು ನಮ್ಮ ಸಾಮರ್ಥ್ಯದ ಹಿಡಿತದಲ್ಲಿರಬೇಕು. ಆಕಾಶಕ್ಕೆ ಕೈ ಹಾಕಬಾರದು. ನಮ್ಮ ಕನಸುಗಳು ನಮಗೆ ನಿಲುಕುವಂತಿರಬೇಕು. ಹಾಗಿದ್ದರೆ ನೆಮ್ಮದಿ ಇರುತ್ತದೆ. ಕೆಲಸದಲ್ಲಿ ಉತ್ಸಹವಿರುತ್ತದೆ. ಜೀವನದಲ್ಲಿ ದುಃಖ–ತಾಪಗಳುಂಟಾಗಲು ಕಾರಣ ನಮ್ಮ ಕನಸು ನಮ್ಮ ಶಕ್ತಿಯನ್ನು ಮೀರಿರುತ್ತದೆ. ಜೀವನದಲ್ಲಿ ಜಾಣನಾಗಿ ಬದುಕಿದವ ಆರಾಮವಾಗಿರುತ್ತಾನೆ. ಹೊರೆ ಬಹಳ ಇರಬಾರದು.

ಕನಸು ಹಿತವಾಗಿರಬೇಕು. ಬೇರೆಯವರನ್ನು ಕಂಡು ನಾವು ಕನಸು ಕಂಡರೆ ಅದು ನಡೆಯುವುದಿಲ್ಲ. ದೊಡ್ಡ ಕನಸು ಕಂಡು ಮನುಷ್ಯ ಘಾಸಿಗೊಳ್ಳಬಾರದು. ತುಕಾರಮಾನಿಗ ಒಂದು ದಿವಸ ಪಂಢರಾಪುರಕ್ಕೆ ಹೋಗಿ ವಿಠ್ಠಲನನ್ನು ಕಂಡ ಕನಸು ಬಿತ್ತು. ಅವನು ಎದ್ದ, ತಂಬೂರಿಯನ್ನು ತೆಗೆದುಕೊಂಡು ಪಂಢರಪುರಕ್ಕೆ ಹೊರಟ. ಮಹಾಸಂತನಾದ ಮನುಷ್ಯ ಸುಂದರ ಕನಸು ಕಂಡು ಸುಂದರ ದೇಶ ಕಟ್ಟಬೇಕು. ಸುಮಾರು ನೂರು ವರ್ಷಗಳ ಹಿಂದೆ ಭಾರತೀಯರಿಗೆ 'ಸ್ವತಂತ್ರ ಭಾರತ'ದ ಕನಸು ಬಿತ್ತು. ಇದು ಲೌಕಿಕ ಕನಸು, ಆ ಕನಸನ್ನು ಪೂರೈಸಲು ಲೌಕಿಕ ತಪಸ್ಸು ಬೇಕು.

ನಾವು ಎಷ್ಟೋ ಸಲ ತಪ್ಪು ಗುರಿಗಳನ್ನು ಹಾಕಿಕೊಂಡು, ತಪ್ಪು ಕನಸು ಕಂಡು, ಜೀವನದ ವೈಭವವನ್ನು ಕಳೆದುಕೊಳ್ಳುತ್ತೇವೆ. ಇದು ಬಾಧಕ ಕಸನು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 27,838 ಆಗಿರುತ್ತದೆ. ಇವುಗಳ ಪೈಕಿ 15,767 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 12,071.

**ಮೇ ತಿಂಗಳ ಪ್ರಕರಣಗಳು :** ದಾವಾಪ್ರಕರಣ 580 ಇತ್ಯರ್ಥಗೊಂಡ ಪ್ರಕರಣಗಳು 469

**ಅಮಲ್ಜಾರಿ ಪ್ರಕರಣಗಳು :** ಒಟ್ಟು 6,017 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1,105 ಪ್ರಕರಣಗಳು ಇತ್ಯರ್ಥಗೊಂಡಿದ್ದು. 4,912 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1029 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾ–ರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 448 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಮೇ ತಿಂಗಳಿನಲ್ಲಿ 127 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.

## ನೂತನ ಸಹಕಾರ ಸಚಿವರಾಗಿ ಹಿರಿಯ ಸಹಕಾರಿ ಹಾಗೂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ಕೆ. ಎನ್ ರಾಜಣ್ಣ, ಇವರ ನೇತೃತ್ವದಲ್ಲಿ ಸಹಕಾರ ಇಲಾಖೆ



### ವ್ಯಕ್ತಿ ಪರಿಚಯ

| | |
|---|---|
| **ಹೆಸರು** | : ಶ್ರೀ ಕೆ.ಎನ್ ರಾಜಣ್ಣ |
| **ತಂದೆ** | : ಶ್ರೀ ನಂಜಪ್ಪ |
| **ತಾಯಿ** | : ಶ್ರೀಮತಿ ಲಕ್ಷ್ಮೀದೇವಮ್ಮ |
| **ಜನನ** | : 03.04.1951 |
| **ಸ್ಥಳ** | ; ಕ್ಯಾತಸಂದ್ರ, ತುಮಕೂರು |
| **ವಿದ್ಯಾಭ್ಯಾಸ** | ; ಬಿ.ಎಸ್ಸಿ, ಎಲ್.ಎಲ್.ಬಿ |
| **ವೃತ್ತಿ** | : ವಕೀಲರು |
| **ವಿಳಾಸ** | : ರಜತಾದ್ರಿ ನಿಲಯ: ಕ್ಯಾತಸಂದ್ರ, ಬಿ.ಹೆಚ್. ರಸ್ತೆ, ತುಮಕೂರು |
| **ದೂರವಾಣಿ** | : ಮನೆ : 2283232 ಮೊ : 9880213221 |

**ಸ್ವಾತಂತ್ರ್ಯ ಹೋರಾಟಗಾರರು ಮತ್ತು ರೈತಾಪಿ ಕುಟುಂಬದಿಂದ ಬಂದವರು**
**ವಿದ್ಯಾರ್ಥಿ ಮುಖಂಡರಾಗಿ ರಾಜಕೀಯ ಪ್ರವೇಶ : 1969ರಲ್ಲಿ ಕಾಂಗ್ರೇಸ್ ಕಾರ್ಯಕರ್ತರಾಗಿ ಸೇವೆ.**

- 1970 ರಿಂದ ತುಮಕೂರು ತಾಲ್ಲೂಕು ಕಾಂಗ್ರೇಸ್ ಪಕ್ಷದ ಕಾರ್ಯದರ್ಶಿಯಾಗಿ ಸೇವೆ.
- ತುಮಕೂರು ಜಿಲ್ಲಾಯುವ ಕಾಂಗ್ರೆಸ್ ಅಧ್ಯಕ್ಷರಾಗಿ 1980 ರಿಂದ 1984 ರವರೆಗೆ ಸೇವೆ
- ತುಮಕೂರು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ.
- ತುಮಕೂರು ಜಿಲ್ಲೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸದಸ್ಯರಾಗಿ 1998 ರಿಂದ 2004ರವರೆಗೆ ಸೇವೆ.
- ಬೆಳ್ಳಾವಿ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕರಾಗಿ 2004 ರಿಂದ 2008 ರವರೆಗೆ ಸೇವೆ.
- ಮಧುಗಿರಿ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕರಾಗಿ 2013 ರಿಂದ 2018 ರವರೆಗೆ ಸೇವೆ.
- ಕರ್ನಾಟಕ ರಾಜ್ಯ ಸಹಕಾರಿ ಆಪೆಕ್ಸ್ ಬ್ಯಾಂಕ ಬೆಂಗಳೂರು ಇಲ್ಲಿ ಅಧ್ಯಕ್ಷರಾಗಿ ದಿನಾಂಕ 24.09.2001 ರಿಂದ 2005ರವರೆಗೆ ಸೇವೆ ಸಲ್ಲಿಸಿ ಮತ್ತು ದಿನಾಂದ 12.08.2015 ರಂದು 2ನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧರಾಗಿ ಆಯ್ಕೆಗೊಂಡು ಸೇವೆ ಸಲ್ಲಿದ್ದಾರೆ.
- 2013 ರಲ್ಲಿ ನಡೆದ 60ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂಗವಾಗಿ ಕರ್ನಾಟಕ ಸರ್ಕಾರವು ಪ್ರತಿಷ್ಠಿತ "ಸಹಕಾರ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.
- 1976ರಲ್ಲಿ ಕ್ಯಾತಸಂದ್ರ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ನಿರ್ದೇಶಕರಾಗಿ ಸೇವೆ.
- 1979ರಲ್ಲಿ ಕ್ಯಾತಸಂದ್ರ ಟೌನ್ ಪಂಚಾಯತ್ ಅಧ್ಯಕ್ಷರಾಗಿ ಸೇವೆ.
- ಕೋ–ಆಪ್ ಬ್ಯಾಂಕ್ ಆಫ್ ಇಂಡಿಯಾ, ನವದೆಹಲಿ ಇಲ್ಲಿ ನಿರ್ದೇಶಕರಾಗಿ ಸೇವೆ.

- ನಾಫೆಡ್ ನವದೆಹಲಿ ಇಲ್ಲಿ ನಿರ್ದೇಶಕರಾಗಿ ಸೇವೆ.
- "ನ್ಯಾಫ್ ಸ್ಕಾಬ್" ಮುಂಬೈ ಇಲ್ಲಿ ಉಪಾಧ್ಯಕ್ಷರಾಗಿ ಸೇವೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ) ಬೆಂಗಳೂರು ಇಲ್ಲಿ ನಿರ್ದೇಶಕರಾಗಿ ಸೇವೆ.
- ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ ಬೆಂಗಳೂರು ಇಲ್ಲಿ 3 ಬಾರಿ ನಿರ್ದೇಶಕರಾಗಿ ಸೇವೆ.
- ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ 2001 ರಿಂದ ನಾಲ್ಕು ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿ ಐದನೇ ಬಾರಿಗೆ ಅವಿರೋಧ ಆಯ್ಕೆಗೊಂಡ ಪ್ರಸ್ತುತ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- ಪ್ರಪಂಚದಾದ್ಯಂತ ಪ್ರವಾಸ ಮಾಡಿ ಅಂತಾರಾಷ್ಟ್ರೀಯ ಸಹಕಾರಿ ಸಮ್ಮೇಳನಗಳಲ್ಲಿ ಭಾಗವಹಿಸಿರುತ್ತಾರೆ.
- ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಸೇವೆ.
- 1979 ರಿಂದ 1989 ರವರೆಗೆ ತುಮಕೂರು ಟಿ.ಎ.ಪಿ.ಸಿ.ಎಂ.ಎಸ್ ಅಧ್ಯಕ್ಷರಾಗಿ 10 ವರ್ಷಗಳ ಸೇವೆ.
- ತುಮಕೂರು ಡಿ.ಸಿ.ಸಿ ಬ್ಯಾಂಕ್‌ನಲ್ಲಿ 5 ಬಾರಿ ನಿರ್ದೇಶಕರಾಗಿ ಸೇವೆ.
- ತುಮಕೂರು ಎ.ಪಿ.ಎಂ.ಸಿಯಲ್ಲಿ 2 ಬಾರಿ ನಿರ್ದೇಶಕರಾಗಿ ಸೇವೆ.
- ತುಮಕೂರು ತಾಲ್ಲೂಕು ಭೂ ನ್ಯಾಯಾಮಂಡಳಿ ಸದಸ್ಯರಾಗಿ 1980ರಲ್ಲಿ ಸೇವೆ
- ಕ್ಯಾತ್ಸಂದ್ರ "ಚಂದ್ರಮೌಳೇಶ್ವರ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಸೇವೆ.
- ತುಮಕೂರು ಜಿಲ್ಲಾ ಸಹಕಾರ ಯೂನಿಯನ ನಿರ್ದೇಶಕರಾಗಿ ಸೇವೆ.
- ಸಹಕಾರಿ ಧುರೀಣರಾದ ಶ್ರೀ ಕೆ.ಎನ್ ರಾಜಣ್ಣನವರ ಹೆಸರಿನ 5 ಸಹಕಾರ ಸಂಘಗಳು ಅಸ್ತಿತ್ವದಲ್ಲಿರುತ್ತದೆ.
- ಸಹಕಾರಿ ಕ್ಷೇತ್ರದಲ್ಲಿ ಸುಮಾರು 35 ವರ್ಷಗಳಿಂಗ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ.
- ತುಮಕೂರು ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಕೆ.ಎನ್ ರಾಜಣ್ಣನವರ ಐತಿಹಾಸಿಕ ಸೇವೆಯ ಕೆಲವು ನಿರ್ದೇಶನಗಳು.

**1. ತುಮಕೂರು ಜಿಲ್ಲೆ ತೀವ್ರ ಬರಗಾಲ ಎದುರಿಸುತ್ತಿದ್ದಾಗ ಸರ್ಕಾರ ಪ್ರಾರಂಭಿಸಲು ಗೋಶಾಳೆಗಳಲ್ಲಿ ರೈತರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ಊಟ ನೀಡುವುದರ ಮೂಲಕ ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್ ರಾಜಣ್ಣನವರು ರಾಜ್ಯಕ್ಕೆ ಮಾದರಿಯಾಗಿದ್ದಾರೆ.**

**2. ಜಿಲ್ಲೆಯ ರೈತರ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾಪುರಸ್ಕಾರವನ್ನು ನೀಡುವ ಮಾದರಿ ಯೋಜನೆಯನ್ನು ಜಾರಿಗೊಳಿಸಿದ ಕೀರ್ತಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್ ರಾಜಣ್ಣನವರಿಗೆ ಸಲ್ಲುತ್ತದೆ.**

**3. 2011–12ನೇ ಸಾಲಿನಲ್ಲಿ ತುಮಕೂರು ಡಿಸಿಸಿ ಬ್ಯಾಂಕ್ ಅತ್ಯುತ್ತಮ ಸಾಧನೆಗಾಗಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನೀಡುವ ಪ್ರಥಮ ಬಹುಮಾನವನ್ನು ಗಳಿಸಿರುವುದು ಅಧ್ಯಕ್ಷರಾದ ಶ್ರೀ ಕೆ.ಎನ್ ರಾಜಣ್ಣನವರ ದೂರದರ್ಶಿತ ಮತ್ತು ಸತತ ಪರಿಶ್ರಮಕ್ಕೆ ಸಂದ ಗೌರವವಾಗಿರುತ್ತದೆ.**

**ತುಮಕೂರು ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಸಂಘಗಳು, ಸ್ವಸಹಾಯ ಸಂಘಗಳು, ಪತ್ತಿನ ಸಹಕಾರ ಸಂಘಗಳು ಪ್ರಾರಂಭವಾಗಲು ಶ್ರೀ ಕೆ.ಎನ್ ರಾಜಣ್ಣನವರ ಶ್ರಮ ಅವಿಸ್ಮರಣೀಯ**

(ರಾಜ್ಯದ ನೂತನ ಸಹಕಾರ ಸಚಿವರಾಗಿ ಆಯ್ಕೆಗೊಂಡ ಸಂದರ್ಭದಲ್ಲಿ ಶುಭ ಕೋರಿ ಸಿದ್ಧಪಡಿಸಿದ ಲೇಖನ)

# ರೈತರ ಬಂಧು, ಜನಪ್ರಿಯ ಸಹಕಾರಿ ಮುಖಂಡ ದೂರದೃಷ್ಟಿಯ ನೇತಾರ, ಸಹಕಾರಿ ಹೃದಯದ ರಾಜಕಾರಣಿ ನೂತನ ಸಹಕಾರ ಸಚಿವ ಮಾನ್ಯ ಶ್ರೀ ಕೆ.ಎನ್. ರಾಜಣ್ಣನವರು

– ಶ್ರೀ ಶಂಕರ ಹೆಗಡೆ, ಸಹಕಾರಿ ಸಲಹೆಗಾರರು, ತುಮಕೂರು



"ಮನುಷ್ಯ ಎಷ್ಟರಮಟ್ಟಿಗೆ ಇತರರ ಒಳ್ಳೆಯದಕ್ಕಾಗಿ ದುಡಿಯುತ್ತಾನೋ ಅಷ್ಟರಮಟ್ಟಿಗೆ ಅವನು ದೊಡ್ಡವನಾಗುತ್ತಾನೆ. ಶ್ರೀ ಕೆ.ಎನ್. ರಾಜಣ್ಣನವರು ಇಂದು ರಾಜ್ಯದ ದೊಡ್ಡ ವ್ಯಕ್ತಿಯಾಗಿ ಬೆಳೆದಿರುವುದರ ರಹಸ್ಯ ಈ ಮಾತಿನಲ್ಲಿ ಅಡಗಿದೆ."

ಬಡಜನತೆಯ ಆರ್ಥಿಕ ಸಂಕಷ್ಟಗಳಿಗೆ ಸಹಕಾರವೇ "ದಿವ್ಯ ಔಷಧಿ" ಎಂದು ನಂಬಿ ಸಹಕಾರಿ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಶ್ರೀ ಕೆ.ಎನ್.ರಾಜಣ್ಣನವರು ರಾಜ್ಯದ ಒಬ್ಬ ಅಪರೂಪದ ಸಹಕಾರಿ, ಜಿಲ್ಲೆಯ ಹೆಮ್ಮೆಯ ಸಹಕಾರಿ.

ಕರ್ನಾಟಕ ರಾಜ್ಯದ ಸಹಕಾರ ಚಳುವಳಿಯಲ್ಲಿ ಶ್ರೀ ಕೆ.ಎನ್. ರಾಜಣ್ಣನವರ ಹೆಸರು ಜನಜನಿತ. ಹಲವಾರು ಸಹಕಾರ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳಸಿ, ಪೋಷಿಸಿ ಎತ್ತರೆತ್ತರಕ್ಕೆ ಕೊಂಡೊಯ್ದ ಅಪರೂಪದ ದಾಖಲೆ. ಅವರ ಕತೃತ್ವ ಶಕ್ತಿ, ದೂರದೃಷ್ಟಿ, ಅಬಲರ ಬಗೆಗಿನ ಅನುಕಂಪ, ಧ್ವನಿ ಇಲ್ಲದವರಿಗೆ ಧ್ವನಿಯಾಗುವ ವ್ಯಕ್ತಿತ್ವ ಅವರದು. ಸಹಕಾರಿ ಕ್ಷೇತ್ರದ ಮುಖಾಂತರ ಜನಸೇವೆಯ ಸಂಕಲ್ಪ ತೊಟ್ಟು ಜೀವನದ ಅನೇಕ ಏರಿಳಿತಗಳನ್ನು ಹಿಮ್ಮೆಟ್ಟಿ ಸಹಕಾರಿ ಕ್ಷೇತ್ರದ ರುವಾರಿಯಾಗಿ ಇಂದು ಸಹಕಾರಿ ಸಚಿವ ಸ್ಥಾನವನ್ನು ಅಲಂಕರಿಸಿ ಶ್ರೀ ಕೆ. ಎನ್. ಆರ್ ರವರು ಒಬ್ಬ ಅಪ್ಪಟ ಸಹಕಾರಿಯಾಗಿದ್ದಾರೆ.

ಶ್ರೀ ಕೆ.ಎನ್.ರಾಜಣ್ಣನವರು ಮೂಲತಃ ರೈತಪರ ಒಲವುಳ್ಳವರು ರೈತಸ್ನೇಹಿಯಾಗಿ ಅವರ ಕಷ್ಟ ಕಾರ್ಪಣ್ಯಗಳಿಗೆ ಬಲವಾಗಿ ಸ್ಪಂದಿಸಿ ಜನಹಿತದ ಚಿಂತೆ ಸೇವಾ ಮನೋಭಾವನೆ ಅವರ ವ್ಯಕ್ತಿತ್ವದ ವೈಶಿಷ್ಟ್ಯ. ಶ್ರೀ ಕೆ.ಎನ್. ರಾಜಣ್ಣನವರು ವಿದ್ಯಾರ್ಥಿ ದೆಸೆಯಿದ್ದಾಗಲೇ ವಿದ್ಯಾರ್ಥಿ ನಾಯಕರಾಗಿದ್ದರು. ನಾಯಕತ್ವದ ಎಲ್ಲ ಗುಣಗಳು ಸಹಜವಾಗಿ ಅವರಲ್ಲಿ ಮೂಡಿ ಬಂದಿದೆ. 1976 ನೇ ವರ್ಷ ಅವರ ಬದುಕಿನಲ್ಲಿ ಹೊಸ ಆಯಾಮವನ್ನು ಪಡೆದ ವರ್ಷ ಕ್ಯಾತ್ಸಂದ್ರ ಪಂಚಾಯಿತಿ ಅಧ್ಯಕ್ಷರಾಗಿ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟ ಅವರು ಹೋರಾಟಗಾರರು. ರೈತರ ಪರವಾಗಿ ರೈತರ ಏಳಿಗೆಗಾಗಿ ಹಗಲಿರುಳು ದುಡಿಯುತ್ತಾರೆ. ಅವರ ಬದುಕನ್ನು ಹಸನುಗೊಳಿಸುವುದಕ್ಕಾಗಿ ಅನೇಕ ವೈವಿಧ್ಯಮಯ ಯೋಜನೆಗಳನ್ನು ಪರಿಣಾಮಕಾರಿಯಾಗಿ ತುಮಕೂರು ಡಿ.ಸಿ.ಸಿ ಬ್ಯಾಂಕಿನ ಮುಖಾಂತರ ಅನುಷ್ಠಾನಗೊಳಿಸುತ್ತಿರುವ ಮುಖಾಂತರ ಶ್ರೀ ರಾಜಣ್ಣನವರು ತುಮಕೂರು ಜಿಲ್ಲೆಯನ್ನು ರಾಜ್ಯದ, ರಾಷ್ಟ್ರದ ಸಹಕಾರಿ ಭೂಪಟದಲ್ಲಿ ಮೂಡುವಂತೆ ಮಾಡಿರುವ ಅಪರೂಪದ ಸಹಕಾರಿ. ಇವರು ನಿಷ್ಠುರವಾದಿ ಹಾಗೂ ಹಠವಾದಿಯಾಗಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ತುಮಕೂರು ಡಿ.ಸಿ.ಸಿ ಬ್ಯಾಂಕ್ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್, ರಾಜ್ಯ ಸಹಕಾರ ಮಹಾಮಂಡಳ, ತುಮಕೂರು ಟಿ.ಎ.ಪಿ.ಸಿ.ಎಂ.ಎಸ್ ರಾಷ್ಟ್ರಮಟ್ಟದ ಬ್ಯಾಂಕುಗಳ ಮಹಾಮಂಡಳ ಸಹಕಾರಿ ಬ್ಯಾಂಕುಗಳ ಮಹಾಮಂಡಳ, ಮುಂತಾದ ಹತ್ತು ಹಲವಾರು ಸಂಘ, ಸಂಸ್ಥೆಗಳೊಂದಿಗೆ ತಮ್ಮನ್ನು ತಾವು ಬೆಸೆದುಕೊಂಡು ಬೆಳೆದ ಶ್ರೀ ಕೆ.ಎನ್.ರಾಜಣ್ಣನವರು ಪ್ರಾಮಾಣಿಕತೆ, ನಿಷ್ಠೆ, ಸೇವಾಭಾವ ಹಾಗೂ ತಾತ್ವಿಕ ವಿಚಾರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳದ ನಿಷ್ಠುರರಾಗಿ ನಾಡಿನ ಶ್ರೇಷ್ಠ ಪುತ್ರರಾಗಿ ಗಣ್ಯರಾಗಿ ಸಹಕಾರಿ ಕ್ಷೇತ್ರದಲ್ಲಿ ಜನಮಾನಸದಲ್ಲಿ ಬೇರೂರಿ ಜನರ ಗಮನ ಸೆಳೆದಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ ಹಾಗೂ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿ ತಮ್ಮ ಹುದ್ದೆಗೆ ಗೌರವ ತರುವಂತಹ ಹಾಗೂ ವೈವಿಧ್ಯಮಯ ಪ್ರಗತಿ ಕಾರ್ಯಗಳನ್ನು ತಮ್ಮ ಅಧಿಕಾರಾವಧಿಯಲ್ಲಿ ಕ್ಷೇತ್ರದಲ್ಲಿ ಕೈಗೊಂಡು ಜನಮಾನಸದಲ್ಲಿ ಆದರ್ಶರಾಗಿರುತ್ತಾರೆ.

ರೈತರ ಆರ್ಥಿಕ ಅಭಿವೃದ್ಧಿ ಸಹಕಾರಿ ರಂಗದಿಂದಲೇ ಮಾತ್ರ ಸಾಧ್ಯವೆಂದು ಮನಗೊಂಡ ಶ್ರೀ ಕೆ.ಎನ್.ರಾಜಣ್ಣನವರು 1979ರಲ್ಲಿ ತುಮಕೂರು ಟಿ.ಎ.ಪಿ.ಸಿ.ಎಂ.ಎಸ್.ನ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರವನ್ನು ಪ್ರವೇಶಿಸಿದರು. 10 ವರ್ಷಗಳಿಗಿಂತಲೂ

ಹೆಚ್ಚು ಕಾಲ ಟಿ.ಎ.ಪಿ.ಸಿ.ಎಂ.ಎಸ್.ಯ ಅಧ್ಯಕ್ಷರಾಗಿ ತನ್ಮೂಲಕ ತುಮಕೂರು ಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರವನ್ನು ತಮ್ಮ ಅಚ್ಚುಮೆಚ್ಚಿನ ಸೇವಾ ಕ್ಷೇತ್ರವನ್ನಾಗಿ ಆರಿಸಿಕೊಂಡರು. ಕ್ಯಾತ್ಸಂದ್ರದ ಚಂದ್ರಮೌಳೇಶ್ವರ ಸಹಕಾರ ಸಂಘದ ಸ್ಥಾಪಕ ಅಧ್ಯಕ್ಷರಾಗಿ ತುಮಕೂರು ಜಿಲ್ಲಾ ಸಹಕಾರಿ ಯೂನಿಯನ್‌ನ ನಿರ್ದೇಶಕರಾಗಿ ಸಹಕಾರಿ ಶಿಕ್ಷಣ ತರಬೇತಿ ಪ್ರಚಾರ ಕಾರ್ಯದಲ್ಲಿಯೂ ಸಹ ಆಸಕ್ತಿ ತೋರಿಸಿದ್ದಾರೆ. ತಮ್ಮ ಅಪಾರ ಅನುಭವ ಮತ್ತು ಪರಿಶ್ರಮದಿಂದ ಸಹಕಾರಿ ತತ್ವ ಆದರ್ಶಗಳಲ್ಲಿ ನಂಬಿಕೆ ಇಟ್ಟು ಈ ಕ್ಷೇತ್ರವನ್ನು ತಮ್ಮ ಅಮೂಲ್ಯ ಸೇವೆಯ ಮೂಲಕ ಶ್ರೀಮಂತಗೊಳಿಸಿದ್ದಾರೆ. ಅವರ ಮಾತಿನಲ್ಲಿಯೇ ಹೇಳಬೇಕಾದರೆ ನಾನು ಜೀವನದಲ್ಲಿ ಬಡತನ, ಸಿರಿತನವನ್ನು ನೋಡಿದ್ದೇನೆ. ಅಧಿಕಾರವನ್ನು ಅನುಭವಿಸಿದ್ದೇನೆ. ಅವೆಲ್ಲವೂ ಶಾಶ್ವತವಲ್ಲ. ರೈತರು ಬಡಜನತೆ ಆರ್ಥಿಕವಾಗಿ ಅಬಲರಾದವರ ಶೋಷಣೆಯನ್ನು ತಪ್ಪಿಸುವುದೇ ನನ್ನ ಜೀವನದ ಗುರಿ. ಈ ದಿಸೆಯಲ್ಲಿ ಸಾಧ್ಯವಿರುವ ಎಲ್ಲ ಯೋಜನೆಗಳನ್ನು ಡಿ.ಸಿ.ಸಿ.ಬ್ಯಾಂಕ್ ಮತ್ತು ರಾಜ್ಯ ಅಪೆಕ್ಸ್ ಬ್ಯಾಂಕಿನ ಮುಖಾಂತರ ಹಾಗೂ ಶಾಸಕನಾಗಿ ಜಾ–ರಿಗೊಳಿಸುತ್ತೇನೆ.

ರಾಜ್ಯದ ಸಹಕಾರಿ ಕ್ಷೇತ್ರದ ಉತ್ತುಂಗ ಸಂಸ್ಥೆ ಎನಿಸಿದ ಅಪೆಕ್ಸ್ ಬ್ಯಾಂಕಿನ

ಅಧ್ಯಕ್ಷರಾಗಿ ದಿನಾಂಕ 01–10–2001 ರಂದು ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಗೊಂಡರು. ತಮ್ಮ ಅಪಾರ ಅನುಭವ ದಿಟ್ಟ ನಿರ್ಧಾರಗಳಿಂದ ಅಪೆಕ್ಸ್ ಬ್ಯಾಂಕನ್ನು ರೈತ ಸಮುದಾಯದ ಉನ್ನತಿಗಾಗಿ ಶ್ರಮಿಸುತ್ತಿರುವ ಬ್ಯಾಂಕ್ ಎಂದು ಮಾರ್ಪಾಡು ಮಾಡಿ ರಾಷ್ಟ್ರದಲ್ಲಿಯೇ ಸಹಕಾರಿ ಕ್ಷೇತ್ರದ ನೇತಾರರೆಂದು ಹೆಸರು ಪಡೆದರು.

ಜಿಲ್ಲೆಯ ಸಹಕಾರಿ ಕ್ಷೇತ್ರದ ಏಕೈಕ ರೈತ ಸಮುದಾಯದ ಬ್ಯಾಂಕಾಗಿರುವ ತುಮಕೂರು ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿ 27–01–2001 ರಂದು ಅಧಿಕಾರ ಸ್ವೀಕರಿಸಿದರು. ಬ್ಯಾಂಕಿನಲ್ಲಿ ಕೃಷಿ ಮತ್ತು ಕೃಷಿಯೇತರ ಸಾಲಗಳ ನೀಡಿಕೆ, ಸಾಲ ವಸೂಲಾತಿ, ಕಾರ್ಯದಕ್ಷತೆ ಆಡಳಿತ ಸುಧಾರಣೆ ತರಬೇತಿ ಮುಂತಾದ ವಿಷಯಗಳಲ್ಲಿ ಉಲ್ಲೇಖನೀಯ ಮಾರ್ಪಾಡುಗಳಿಂದ ಬ್ಯಾಂಕಿಗೆ ಒಂದು ಹೊಸ ರೂಪವನ್ನು ತಂದುಕೊಟ್ಟರು. ಇಂದು ತುಮಕೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕು ಒಂದು ಆದರ್ಶ ಮತ್ತು ಅನುಕರಣೀಯ ಡಿ.ಸಿ.ಸಿ. ಬ್ಯಾಂಕಾಗಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ.

ಇಂದು ರಾಜ್ಯದಲ್ಲಿಯೇ ಮೌನಕ್ರಾಂತಿ ನಡೆಯುತ್ತಿದ್ದು, ತುಮಕೂರು ಡಿಸಿಸಿ ಬ್ಯಾಂಕ್ ಮುಂಚೂಣಿಯಲ್ಲಿದೆ. ರಾಷ್ಟ್ರಮಟ್ಟದ ಸಹಕಾರಿ ಕ್ಷೇತ್ರದಲ್ಲಿಯೂ ಸಹ ಶ್ರೀ ಕೆ.ಎನ್.ರಾಜಣ್ಣನವರ ಸೇವೆ ವಿಸ್ತಾರಗೊಂಡು ರಾಷ್ಟ್ರೀಯ ರಾಜ್ಯ ಸಹಕಾರ ಬ್ಯಾಂಕುಗಳ ಒಕ್ಕೂಟದ ನಿರ್ದೇಶಕರಾಗಿ ರಾಜ್ಯ ಸಹಕಾರಿ ಮಾರಾಟ ಮಹಾಮಂಡಲದ ನಿರ್ದೇಶಕರಾಗಿ ಸಹಕಾರಿ ಕ್ಷೇತ್ರದ ಎಲ್ಲಾ ಮಜಲುಗಳಲ್ಲಿ ತಮ್ಮ ವಿಶಿಷ್ಟಪೂರ್ಣವಾದ ವ್ಯಕ್ತಿತ್ವದ ಅರ್ಪಣಾ ಮನೋಭಾವದಿಂದ ರಾಷ್ಟ್ರದ ಸಹಕಾರ ಅಭಿವೃದ್ಧಿಯಲ್ಲಿ ಖ್ಯಾತಿ ಪಡೆದಿದ್ದಾರೆ. ಜಿಲ್ಲೆಯ ಬೆಳ್ಳಾವಿ ಕ್ಷೇತ್ರದಿಂದ ವಿಧಾನ ಸಭೆಗೆ ಪ್ರತಿನಿಧಿಸಿ ತೀರಾ ಹಿಂದುಳಿದ, ಬಡವರ ಸಮಸ್ಯೆಗಳಿಗೆ ಬಲವಾಗಿ ಸ್ಪಂದಿಸುತ್ತಿದ್ದಾರೆ. ಜನತೆಯ ದಕ್ಷ ಶಾಸಕರೆಂದು ಕೀರ್ತಿಗಳಿಸಿರುತ್ತಾರೆ. 1998ರಿಂದ 2004 ರವರೆಗೆ ತುಮಕೂರು ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ಅತ್ಯಧಿಕ ಮತಗಳ ಅಂತರದಿಂದ ಜಯಶೀಲರಾಗಿ ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಅನೇಕ ಬಾರಿ ವಿದೇಶ ಪ್ರವಾಸ ಕೈಗೊಂಡು ಅಲ್ಲಿನ ಸಹಕಾರಿ ಅಭಿವೃದ್ಧಿ ಬಗೆಗೆ ಅಧ್ಯಯನ ಮಾಡಿದ್ದಾರೆ.

ಜಿಲ್ಲೆಯ ಆರ್ಥಿಕ, ರಾಜಕೀಯ, ಸಹಕಾರಿ ಕ್ಷೇತ್ರದಲ್ಲಿ ಅನುಪಮ ಸೇವೆ ಮಾಡುತ್ತಿರುವ ಶ್ರೀ ಕೆ.ಎನ್.ರಾಜಣ್ಣನವರು ಜಿಲ್ಲೆಯು ರಾಷ್ಟ್ರದ ಸಹಕಾರ ಕ್ಷೇತ್ರಕ್ಕೆ ನೀಡಿದ ಅನುಪಮ ಕೊಡುಗೆಯಾಗಿ ಈ ಕ್ಷೇತ್ರವನ್ನು ಬೆಳೆಸಲು ಪ್ರಗತಿಯತ್ತ ಕೊಂಡೊಯ್ಯುತ್ತಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿ ಸುಮಾರು 45 ವರ್ಷಗಳಿಂದ ಗಣನೀಯ ಸೇವೆ ಸಲ್ಲಿಸುತ್ತಾ ಬಂದಿರುತ್ತಾರೆ. ತುಮಕೂರು ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾಗಿ ಶ್ರೀ ಕೆ.ಎನ್.ರಾಜಣ್ಣನವರ ಐತಿಹಾಸಿಕ ಸೇವೆಯ ಕೆಲವು ನಿದರ್ಶನಗಳು :

1. ತುಮಕೂರು ಜಿಲ್ಲೆ ತೀವ್ರ ಬರಗಾಲ ಎದುರಿಸುತ್ತಿದ್ದಾಗ ಸರ್ಕಾರ ಪ್ರಾರಂಭಿಸಿದ ಗೋಶಾಲೆಗಳಿಗೆ ಡಿ.ಸಿ.ಸಿ ಬ್ಯಾಂಕಿನ ವತಿಯಿಂದ ರೈತರಿಗೆ ಮತ್ತು ಅವರ ಕುಟುಂಬದವರಿಗೆ ಉಚಿತ ಊಟ ನೀಡುವುದರ ಮೂಲಕ ರಾಜ್ಯಕ್ಕೆ ಮಾದರಿಯಾಗಿದೆ.

2. ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿದ ಕೀರ್ತಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣನವರಿಗೆ ಸಲ್ಲುತ್ತದೆ. ಜಿಲ್ಲೆಯ ರೈತರ ಮಕ್ಕಳಿಗೆ ಪ್ರತಿವರ್ಷ ಪ್ರತಿಭಾ ಪುರಸ್ಕಾರವನ್ನು ನೀಡುವ ಮಾದರಿ ಯೋಜನೆಯನ್ನು ಜಾರಿಗೊಳಿಸಿ ಗ್ರಾಮೀಣ ಪ್ರದೇಶದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸುತ್ತಿರುವ ಶ್ರೀ ಕೆ.ಎನ್.ರಾಜಣ್ಣನವರ "ಸಾಮಾಜಿ–ಕ ಕಳಕಳಿ" ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಹಿರಿಯ ಸಹಕಾರಿಯಾಗಿ ಹಾಗೂ ಈ ಕ್ಷೇತ್ರಕ್ಕೆ 4 ದಶಕಗಳ ಅವಿರತ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಗೌರವಿಸಿ 14–11–2013 ರಂದು ಜರುಗಿದ 2013ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಆಚರಣೆ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದಿಂದ "ಸಹಕಾರ ರತ್ನ" ಪುರಸ್ಕಾರಕ್ಕೆ ಭಾಜನರಾಗಿರುತ್ತಾರೆ. ಕರ್ನಾಟಕ ರಾಜ್ಯದ ಸಹಕಾರಿ ಚಳುವಳಿಯ ಉತ್ತುಂಗ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಎರಡನೇ ಬಾರಿಗೆ ಆಯ್ಕೆಗೊಂಡು ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿರುತ್ತಾರೆ. ಅಲ್ಲದೆ ಏಷ್ಯಾದಲ್ಲಿಯೇ ಪ್ರಥಮ ಸಹಕಾರ ಸಂಘವೆಂದೆನಿಸಿದ ಕಣಗಿನಹಾಳ್ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾದ ಅವಧಿಯಲ್ಲಿ ಭೇಟಿ ನೀಡಿ ಸಂಘದ ಪುನಃಶ್ಚೇತನ ಕಾರ್ಯಕ್ಕೆ ಅಪೆಕ್ಸ್ ಬ್ಯಾಂಕಿನಿಂದ ಭಾರಿ ಮೊತ್ತದ ಆರ್ಥಿಕ ನೆರವನ್ನು ನೀಡಿರುವುದು ಅವರಿಗೆ ಸಹಕಾರಿ ಚಳುವಳಿಯ ಮೇಲಿರುವ ಕಾಳಜಿ ಹಾಗೂ ರೈತ ಸಮುದಾಯದ ಮೇಲೆ ಇರುವ ಅನುಕಂಪ ಸೇವಾ ಭಾವನೆಯನ್ನು ಎತ್ತಿ ತೋರಿಸುತ್ತದೆ. ರಾಜಣ್ಣನವರು ರೈತರ ಪರವಾಗಿ ರೈತರ ಹೇಳಿಕೆಗಾಗಿ ರೈತರ ಬದುಕನ್ನು ಹಸನಗೊಳಿಸುವುದಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು.

ಹೀಗೆ ಗ್ರಾಮಾಂತರ ಜನತೆಯೊಂದಿಗೆ ತಮ್ಮನ್ನು ಬೆರೆಸಿಕೊಂಡು ಬೆಳೆದ ಶ್ರೀ ಕೆ.ಎನ್.ಆರ್.ರವರು ರೈತರನ್ನು ಮಧ್ಯವರ್ತಿಗಳ ಶೋಷಣೆಯಿಂದ ಮುಕ್ತಗೊಳಿಸಲು ಅನೇಕ ಪ್ರಗತಿಪರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದಾರೆ. ರೈತರ ಜಾಗೃತಿಗಾಗಿ ಅವರ ಸರ್ವಾಂಗೀಣ ಉನ್ನತಿಗಾಗಿ ಸಹಕಾರದ ಅಸ್ತ್ರವನ್ನು ಬಳಸಲು ಸದಾ ಅರ್ಪಿತರಾಗಿದ್ದಾರೆ. ಹೀಗೆ ರಾಷ್ಟ್ರದ ಸಹಕಾರಿ ಚಳುವಳಿಗೆ ತುಮಕೂರು ಜಿಲ್ಲೆ ನೀಡಿದ ಒಂದು ಉತ್ತಮ ಅನುಪಮ ಕೊಡುಗೆ ಶ್ರೀ ಕೆ.ಎನ್.ರಾಜಣ್ಣನವರು.

ಹಿರಿಯ ಸಹಕಾರಿ ಹಾಗೂ ಸಹಕಾರಿ ಕ್ಷೇತ್ರದ ಹೆಮ್ಮೆಯ ಪುತ್ರ ಶ್ರೀ ಕೆ. ಎನ್. ರಾಜಣ್ಣನವರು ತುಮಕೂರು ಜಿಲ್ಲೆಯ ಅಪರೂಪದ ಕೊಡುಗೆ. ರಾಜ್ಯ ಸಹಕಾರ ಸಚಿವರಾಗಿ ಜನಸೇವೆ ಗೈಯ್ಯಲು ಕನಸನ್ನು ಹೊತ್ತಿ ಇಂದು ಮಾನ್ಯ ಶ್ರೀ ಸಿದ್ದರಾಮಯ್ಯನವರ ಸಂಪುಟದಲ್ಲಿ ಸಹಕಾರ ಸಚಿವರಾಗಿರುವುದು ಸಹಕಾರಿಗಳು ಹೆಮ್ಮೆ ಪಡುವ ವಿಷಯವಾಗಿದೆ. ಸಮಸ್ತ ಸಹಕಾರಿಗಳ, ಬಡವರ, ದುರ್ಬಲ ವರ್ಗದವರ ಧ್ವನಿಯಾಗಿ ನಾನು ಕೆಲಸ ಮಾಡುತ್ತೇನೆಂದು ಇತ್ತೀಚೆಗೆ ತುಮಕೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿಕೆ ನೀಡಿರುವುದು ಇಲ್ಲಿ ಉಲ್ಲೇಖನೀಯ. ಸಹಕಾರಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಕ್ರಾಂತಿಕಾರಿ ಬದಲಾವಣೆಯನ್ನು ನಾವು ಅಪೇಕ್ಷಿಸಿದರೆ ತಪ್ಪಾಗಲಿಕ್ಕಿಲ್ಲ.

**ಜೈ ಹಿಂದ್ – ಜೈ ಸಹಕಾರ**

## ನೂತನ ಸಹಕಾರ ಸಚಿವರಾದ ಶ್ರೀ ಕೆ ಎನ್ ರಾಜಣ್ಣರವರಿಂದ ಸಹಕಾರ ಇಲಾಖೆಯ ಹಾಗೂ ಸಂಬಂಧಿತ ಅಧಿಕಾರಿಗಳ ಕಾರ್ಯಚಟುವಟಿಕೆಗಳ ಪರಿಚಯ ಕಾರ್ಯಕ್ರಮ



**ಬೆಂಗಳೂರು** : ದಿನಾಂಕ 01.06.2023 ರಂದು ರಾಜ್ಯದ ನೂತನ ಸಹಕಾರ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಪ್ರಥಮ ಬಾರಿಗೆ ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣ ರವರು ರಾಜ್ಯದ ಸಹಕಾರಿ ಇಲಾಖೆಯ ಹಾಗೂ ಅಧಿಕಾರಿಗಳ ಪರಿಚಯ ಕಾರ್ಯಕ್ರಮವನ್ನು ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು.

ಕರ್ನಾಟಕ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್ ಆರ್ ಉಮಾಶಂಕರ್ ಐಎಎಸ್, ಸಹಕಾರ ಸಂಘಗಳ ನಿಬಂಧಕರಾದ ಡಾ. ಕ್ಯಾಪ್ಟನ್ ಕೆ. ರಾಜೇಂದ್ರ ಐಎಎಸ್, ಅಧಿಕಾರಿಗಳು, ಅಪರ ನಿಬಂಧಕರು, ಜಂಟಿ ನಿಬಂಧಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿದ್ದರು.

ಸಹಕಾರ ಇಲಾಖೆಯ ಕಾರ್ಯಚಟುವಟಿಕೆಗಳು ಸಹಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಸ್ಪಂಧಿಸುವಂತೆ ಇರಬೇಕು. ಸಹಕಾರಿ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರನ್ನು, ಸಹಕಾರಿಗಳನ್ನು ಗೌರವಿಸಬೇಕು ಅವರ ಕಾರ್ಯಗಳನ್ನು ತ್ವರಿತಗತಿಯಲ್ಲಿ ಮಾಡಿಕೊಡುವ ಪ್ರವೃತ್ತಿಯನ್ನು ಬೆಳಸಿಕೊಳ್ಳಬೇಕು ಎಂದು ತಿಳಿಸಿದರು.

### ಸೌಹಾರ್ದ ಸಹಕಾರಿಗಳ ಬಗ್ಗೆ ಸಚಿವರು

ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಮಾತನಾಡಿದ ಸಹಕಾರ ಸಚಿವರು ಈ ಕ್ಷೇತ್ರದ ಬಗ್ಗೆ ನನಗೆ ಮಾಹಿತಿ ಇದೆ. ಈ ಕ್ಷೇತ್ರ ಉಳಿಯಬೇಕಾದರೆ, ಬೆಳೆಯಬೇಕಾದರೆ ಸೌಹಾರ್ದ ಸಹಕಾರಿಗಳು ಅತ್ಯಂತ ಕ್ರೀಯಾಶೀಲರಾಗಿ ಸಾರ್ವಜನಿಕರಿಗೆ, ಸದಸ್ಯರಿಗೆ ಯಾವುದೇ ತೊಂದರೆಗಳು ಉಂಟಾಗದಂತೆ ಕಾರ್ಯನಿರ್ವಹಿಸಿದ್ದಲ್ಲಿ ಸರ್ಕಾರ ಸಂಪೂರ್ಣ ಬೆಂಬಲವನ್ನು ನೀಡುತ್ತದೆ ಎಂದು ತಿಳಿಸಿದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ

**ಯಾದಗಿರಿ** : ದಿನಾಂಕ 22.05.2023 ರಂದು ಯಾದಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ"ಯನ್ನು ಮಾತೋಶ್ರೀ ಹೇಮರೆಡ್ಡಿ ಮಲ್ಲಮ್ಮ ಪತ್ತಿನ ಸೌಹಾರ್ದ ಸಹಕಾರಿ ಸಂಘದಲ್ಲಿ ಆಯೋಜಿಸಲಾಗಿತ್ತು. ವರ್ಷಾಂತ್ಯದ ಮಾಹಿತಿ, ಸೌಹಾರ್ದ ಸಹಕಾರಿಗಳಿಗೆ ಠೇವಣಿ ಮತ್ತು ಸಾಲಗಳಿಗೆ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ, ಚುನಾವಣಾ ಮಾಹಿತಿ ಹಾಗೂ ಲೆಕ್ಕಪರಿಶೋಧನಾ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿರವರು ಮತ್ತು ಶ್ರೀ ಪವನ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಮುಖ್ಯಕಾರ್ಯನಿರ್ವಾಹಕರ ಪರಸ್ಪರ ಪರಿಚಯದ ಮೂಲಕ ಪ್ರಾರಂಭವಾಯಿತು. ಒಟ್ಟು 12 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ದಿನಾಂಕ 23.05.2023 ರಂದು ಸುರಪುರ ತಾಲೂಕಿನ ಸಹಕಾರಿಗಳಿಗೆ ನವಕರ್ನಾಟಕ ಜನಸೇವಾ ಸೌಹಾರ್ದ ಸಹಕಾರಿಯಲ್ಲಿ ಮತ್ತು ಶಹಾಪೂರ ತಾಲೂಕಿನ ಸಹಕಾರಿಗಳಿಗೆ ಶಹಾಪುರ ಸಮೃದ್ಧಿ ಸೌಹಾರ್ದ ಸಹಕಾರಿಯಲ್ಲಿ "ಕ್ಲಸ್ಟರ್ ಮಟ್ಟದ ತರಬೇತಿ"ಯನ್ನು ಆಯೋಜಿಸಲಾಗಿತ್ತು. 7 ವರ್ಷಾಂತ್ಯದ ಮಾಹಿತಿ, ಸೌಹಾರ್ದ ಸಹಕಾರಿಗಳಿಗೆ ಠೇವಣಿ ಮತ್ತು ಸಾಲಗಳಿಗೆ ಬಡ್ಡಿದರ ನಿಗದಿಪಡಿಸಿರುವ ಸುತ್ತೋಲೆ, ಚುನಾವಣಾ ಮಾಹಿತಿ ಹಾಗೂ ಲೆಕ್ಕಪರಿಶೋಧನಾ ಕುರಿತು ಜಿಲ್ಲಾ ಸಂಯೋಜಕರಾದ ಶ್ರೀ ವೀರಶೆಟ್ಟಿ ರವರು ಮಾಹಿತಿ ನೀಡಿದರು. ಒಟ್ಟು 30 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

**ಕಲಬುರಗಿ** : ದಿನಾಂಕ 25.05.2023 ರಂದು ಕಲಬುರಗಿ ಪ್ರಾಂತದ ಕಲಬುರಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿ ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ವರ್ಷಾಂತ್ಯ ಆರ್ಥಿಕ ಮಾಹಿತಿ, ಚುನಾವಣಾ ಮಾಹಿತಿ, ಲೆಕ್ಕಪರಿಶೋಧನಾ ವರದಿಯ ಕುರಿತು ಕಲಬುರಗಿ ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಕೆ ಇವರು ಮಾಹಿತಿ ನೀಡಿದರು, ಸಹಕಾರಿಗಳಿಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಕಾಮನ್ ಸಾಫ್ಟ್‌ವೇರ್ ಕುರಿತು ಅರ್ಹ ಮತದಾರರ ಪಟ್ಟಿಯ ಮಾಹಿತಿ ನೀಡಿದರು. ತರಬೇತಿಯಲ್ಲಿ 28 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಳ್ಳಕೆರೆ** : ದಿನಾಂಕ 24.05.2023 ರಂದು ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ಮಾಹಿತಿ ಕಾರ್ಯಾಗಾರವನ್ನು ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ, ಚಳ್ಳಕೆರೆ ಇಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಇವರು ಅಗತ್ಯ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ 12 ಸೌಹಾರ್ದ ಸಹಕಾರಿಗಳಿಂದ 13 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸೌಹಾರ್ದ ಸಹಕಾರಿ ಕ್ಷೇತ್ರದ ಹೆಮ್ಮೆ ಆಯ್ಕೆಯಾದ ಎಲ್ಲಾ ಶಾಸಕರುಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.



ಶ್ರೀ ಬಸನಗೌಡ ಪಾಟೀಲ ಯತ್ನಾಳ, ವಿಜಯಪುರ



ಶ್ರೀ ಲಕ್ಷ್ಮಣ ಸವದಿ
ಮಾಜಿ ಸಚಿವರು, ಅಥಣಿ




ಶ್ರೀ ಅರಗ ಜ್ಞಾನೇಂದ್ರ
ಮಾಜಿ ಸಚಿವರು, ತೀರ್ಥಹಳ್ಳಿ



ಶ್ರೀ ಬಿ.ಆರ್ ಪಾಟೀಲ
ಆಳಂದ



ಶ್ರೀಮತಿ ಶಶಿಕಲಾ ಜೊಲ್ಲೆ
ಮಾಜಿ ಸಚಿವರು, ನಿಪ್ಪಾಣಿ




ಶ್ರೀ ಹಂಪನಗೌಡ ಬಾದರ್ಲಿ
ಮಾಜಿ ಸಚಿವರು, ಸಿಂಧನೂರು



ಶ್ರೀ ಎಂ.ಬಿ.ಪಾಟೀಲ
ಮಾನ್ಯ ಸಚಿವರು, ಬಬಲೇಶ್ವರ



ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ
ಮಾನ್ಯ ಸಚಿವರು,
ಬೆಳಗಾವಿ ಗ್ರಾಮಂತರ



ಶ್ರೀ ಜೆ.ಟಿ.ಪಾಟೀಲ
ಬೀಳಗಿ



ಶ್ರೀ ಯಶವಂತರಾಯಗೌಡ ವಿ. ಪಾಟೀಲ, ಇಂಡಿ




ಶ್ರೀ ಡಿ. ಸುಧಾಕರ
ಹಿರಿಯೂರು



ಶ್ರೀ ಸುನೀಲಕುಮಾರ
ಮಾಜಿ ಸಚಿವರು, ಕಾರ್ಕಳ




ಶ್ರೀ ವಿಜಯಾನಂದ ಕಾಶ್ಯಪ್ಪನವರ
ಇಳಕಲ್



ಶ್ರೀ ಎಂ ಚಂದ್ರಪ್ಪ
ಹೊಳಲ್ಕೆರೆ



ಶ್ರೀ ಯಶಪಾಲ ಸುವರ್ಣ
ಉಡುಪಿ



ಶ್ರೀ ವೇದವ್ಯಾಸ ಕಾಮತ್
ಮಂಗಳೂರು ದಕ್ಷಿಣ



ಶ್ರೀ ರುದ್ರಪ್ಪ ಲಮಾಣಿ
ರಾಣೆಬೆನ್ನೂರು



ಶ್ರೀ ಜಗದೀಶ ಗುಡಗುಂಟಿ
ಜಮಖಂಡಿ



ಶ್ರೀ ನಿಖಿಲ್ ಕತ್ತಿ
ಹುಕ್ಕೇರಿ



ಶ್ರೀ ಗುರುರಾಜ ಶೆಟ್ಟಿ ಗಂಟಿಹೊಳೆ
ಬೈಂದೂರು

## ರಾಜ್ಯದಿಂದ ನೂತನವಾಗಿ ಆಯ್ಕೆಯಾಗಿರುವ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

### ನೂತನ ಸಚಿವರು ಹಾಗೂ ಅವರ ಖಾತೆಗಳು

| ಕ್ರ.ಸಂ | ಹೆಸರು | ಖಾತೆ |
|---|---|---|
| 1 | ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) | ಹಣಕಾಸು, ಆಡಳಿತ ಸುಧಾರಣೆ, ಗುಪ್ತಚರ, ವಾರ್ತಾ ಇಲಾಖೆ |
| 2 | ಶ್ರೀ ಡಿ.ಕೆ ಶಿವಕುಮಾರ್ (ಉಪ ಮುಖ್ಯಮಂತ್ರಿಗಳು) | ಜಲಸಂಪನ್ಮೂಲ, ಬೆಂಗಳೂರು ನಿಗಮ ಅಭಿವೃದ್ಧಿ (ಬೆಂಗಳೂರು ಅಭಿವೃದ್ಧಿ, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯೂಎಸ್‌ಎಸ್‌ಬಿ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ಸೇರಿದಂತೆ) |
| 3 | ಶ್ರೀ ಡಾ ಜಿ ಪರಮೇಶ್ವರ್ | ಗೃಹ (ಗುಪ್ತಚರ ಹೊರತುಪಡಿಸಿ) |
| 4 | ಶ್ರೀ ಎಚ್ ಕೆ ಪಾಟೀಲ್ | ಕಾನೂನು ಮತ್ತು ಸಂಸದೀಯ ವ್ಯವಹಾರ, ಸಣ್ಣ ನೀರಾವರಿ |
| 5 | ಶ್ರೀ ಕೆ ಎಚ್ ಮುನಿಯಪ್ಪ | ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ |
| 6 | ಶ್ರೀ ಕೆ ಜೆ ಜಾರ್ಜ್ | ಇಂಧನ |
| 7 | ಶ್ರೀ ಎಂ ಬಿ ಪಾಟೀಲ್ | ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಕರ್ಯ ಅಭಿವೃದ್ಧಿ |
| 8 | ಶ್ರೀ ರಾಮಲಿಂಗಾರೆಡ್ಡಿ | ಸಾರಿಗೆ |
| 9 | ಶ್ರೀ ಸತೀಶ್ ಜಾರಕಿಹೊಳಿ | ಲೋಕೋಪಯೋಗಿ |
| 10 | ಶ್ರೀ ಪ್ರಿಯಾಂಕ್ ಖರ್ಗೆ | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿಬಿಟಿ |
| 11 | ಶ್ರೀ ಜಮೀರ್ ಅಹ್ಮದ್ ಖಾನ್ | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತ |
| 12 | ಶ್ರೀ ಕೃಷ್ಣ ಬೈರೇಗೌಡ | ಕಂದಾಯ (ಮುಜರಾಯಿ ಹೊರತುಪಡಿಸಿ) |
| 13 | ಶ್ರೀ ದಿನೇಶ್ ಗುಂಡೂರಾವ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| 14 | ಶ್ರೀ ಎನ್ ಚಲುವರಾಯಸ್ವಾಮಿ | ಕೃಷಿ |
| 15 | ಶ್ರೀ ಕೆ ವೆಂಕಟೇಶ್ | ಪಶು ಸಂಗೋಪನೆ ಮತ್ತು ರೇಷ್ಮೆ |
| 16 | ಶ್ರೀ ಎಚ್‌ಸಿ ಮಹದೇವಪ್ಪ | ಸಮಾಜ ಕಲ್ಯಾಣ |
| 17 | ಶ್ರೀ ಈಶ್ವರ್ ಖಂಡ್ರೆ | ಅರಣ್ಯ, ಜೈವಿಕ ಮತ್ತು ಪರಿಸರ |
| 18 | ಶ್ರೀ ಕೆ ಎನ್ ರಾಜಣ್ಣ | ಸಹಕಾರ |
| 19 | ಶ್ರೀ ಶರಣಬಸಪ್ಪ ದರ್ಶನಾಪುರ್ | ಸಣ್ಣ ಕೈಗಾರಿಕೆ, ಸಾರ್ವಜನಿಕ ಸ್ವಾಮ್ಯದ ಕೈಗಾರಿಕೆ |
| 20 | ಶ್ರೀ ಶಿವಾನಂದ ಪಾಟೀಲ್ | ಟೆಕ್ಸ್‌ಟೈಲ್, ಸಕ್ಕರೆ, ಕೃಷಿ ಮಾರುಕಟ್ಟೆ |
| 21 | ಶ್ರೀ ಆರ್ ಬಿ ತಿಮ್ಮಾಪುರ | ಅಬಕಾರಿ |
| 22 | ಶ್ರೀ ಎಸ್ ಎಸ್ ಮಲ್ಲಿಕಾರ್ಜುನ್ | ಗಣಿ, ಭೂವಿಜ್ಞಾನ ಮತ್ತು ತೋಟಗಾರಿಕೆ |

| | | |
|---|---|---|
| 23 | ಶ್ರೀ ಶಿವರಾಜ ಎಸ್ ತಂಗಡಗಿ | ಹಿಂದುಳಿದ ವರ್ಗ ಮತ್ತು ಎಸ್‌ಸಿ, ಎಸ್‌ಟಿ ಕಲ್ಯಾಣ |
| 24 | ಶ್ರೀ ಶರಣ್ ಪ್ರಕಾಶ್ ಪಾಟೀಲ್ | ವೈದ್ಯಕೀಯ ಶಿಕ್ಷಣ |
| 25 | ಶ್ರೀ ಮಂಕಾಳ್ ವೈದ್ಯ | ಮೀನುಗಾರಿಕೆ, ಬಂದರು ಮತ್ತು ಒಳ ಸಾರಿಗೆ |
| 26 | ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್ | ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನ, ಹಿರಿಯರ ಕಲ್ಯಾಣ |
| 27 | ಶ್ರೀ ರಹೀಂ ಖಾನ್ | ಹಜ್, ಪೌರಾಡಳಿತ |
| 28 | ಶ್ರೀ ಡಿ ಸುಧಾಕರ್ | ಮೂಲಸೌಕರ್ಯ ಅಭಿವೃದ್ಧಿ, ಸಾಂಖ್ಯಿಕ ಮತ್ತು ಯೋಜನೆ |
| 29 | ಶ್ರೀ ಸಂತೋಷ್ ಲಾಡ್ | ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ |
| 30 | ಶ್ರೀ ಎನ್ ಎಸ್ ಬೋಸರಾಜು | ಪ್ರವಾಸೋದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ |
| 31 | ಶ್ರೀ ಬೈರತಿ ಸುರೇಶ್ | ನಗರಾಭಿವೃದ್ಧಿ ಮತ್ತು ನಗರ ಯೋಜನೆ (ಬೆಂಗಳೂರು ನಗರ ಹೊರತುಪಡಿಸಿ) |
| 32 | ಶ್ರೀ ಮಧು ಬಂಗಾರಪ್ಪ | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ |
| 33 | ಶ್ರೀ ಡಾ ಎಂಸಿ ಸುಧಾಕರ್ | ಉನ್ನತ ಶಿಕ್ಷಣ |
| 34 | ಶ್ರೀ ಬಿ ನಾಗೇಂದ್ರ | ಯುವಜನ ಮತ್ತು ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ |

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಬಾಗಲಕೋಟೆ** : ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನ ಪೂರ್ವ ಸಿದ್ಧತೆ ಹಾಗೂ ಆದಾಯ ತೆರಿಗೆ, ಜಿಎಸ್ ಟಿ ವಿಷಯಗಳ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಶ್ರೀ ಸಾಯಿ ಮಂದಿರ್, ವಿದ್ಯಾಗಿರಿ, ಬಾಗಲಕೋಟೆ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಗೆ ಉದ್ಘಾಟಕರಾಗಿ ಶ್ರೀ ದಾನಯ್ಯ ಹಿರೇಮಠ್, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬಾಗಲಕೋಟೆ ಇವರು ಆಗಮಿಸಿದ್ದರು. ಮುಂಜಾನೆ ಅವಧಿಯಲ್ಲಿ ಆದಾಯ ತೆರಿಗೆ ಹಾಗೂ ಜಿ. ಎಸ್.ಟಿ. ಕುರಿತು ಶ್ರೀ ಮಧುಕರ ಹೆಗ್ಡೆ, ಸನ್ನದು ಲೆಕ್ಕ ಪರಿಶೋಧಕರು ಇವರು ಉಪನ್ಯಾಸ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಲೆಕ್ಕ ಪರಿಶೋಧನಾ ಪೂರ್ವ ಸಿದ್ಧತೆ ಕುರಿತು ಶ್ರೀ ಸುನಿಲ್ ಪತ್ತಾರ, ಸನ್ನದು ಲೆಕ್ಕ ಪರಿಶೋಧಕರು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ 270 ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ** : ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿ ಆಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಅಮರನಾಥ ಬಿರಾದಾರ, ಹಿರಿಯ ಸಹಕಾರಿಗಳು ವಿಜಯಪುರ ಇವರು ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿ ಹಾಗೂ ಅತಿಥಿಯಾಗಿ ಶ್ರೀ ಸುನೀಲ ಪತ್ತಾರ, ಮಾನ್ಯ ಹಿರಿಯ ಸಹಾಯಕ ನಿರ್ದೇಶಕರು ಲೆಕ್ಕ ಪರಿಶೋಧನಾ ಇಲಾಖೆ ಮುಧೋಳ. ಇನ್ನೋರ್ವ ಸಂಪನ್ಮೂಲ ವ್ಯಕ್ತಿ ಹಾಗೂ ಅತಿಥಿಯಾಗಿ, ಶ್ರೀ ಎಸ್ ಜಿ ಹೆಗಡೆ ಮಾನ್ಯ ಸನ್ನದು ಲೆಕ್ಕ ಪರಿಶೋಧಕರು ಶಿರಸಿ ಇವರು ಭಾಗವಹಿಸಿದ್ದರು.

ಲೆಕ್ಕ ಪತ್ರಗಳ ಸಿದ್ಧತೆ ವಿಷಯದ ಕುರಿತು ಶ್ರೀ ಸುನೀಲ ಪತ್ತಾರ ಇವರು ಹಾಗೂ ಆದಾಯ ತೆರಿಗೆ ಹಾಗೂ ಜಿ.ಎಸ್.ಟಿ. ವಿಷಯದ ಕುರಿತು ಶ್ರೀ ಎಸ್ ಜಿ ಹೆಗಡೆ ಇವರುಗಳು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ 208 ಸೌಹಾರ್ದ ಸಹಕಾರಿಗಳಿಂದ 239 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಭಿನಂದನಾ ಕಾರ್ಯಕ್ರಮ



**ಬೆಂಗಳೂರು :** ದಿನಾಂಕ 29.05.2023 ರಂದು ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀ ಹೆಚ್.ವಿ ರಾಜೀವ್ ಇವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀ ರಘುನಂದನ್, ಶ್ರೀಮತಿ ಶೋಭಾ ಆರ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಸನ್ಮಾನ ಕಾರ್ಯಕ್ರಮ




**ಬೆಂಗಳೂರು :** ದಿನಾಂಕ 29.05.2023 ರಂದು ತರಬೇತಿ ವ್ಯವಸ್ಥಾಪಕರಾದ ಮತ್ತು ಹಿರಿಯರಾದ ಶ್ರೀಮತಿ ಮತ್ತು ಶ್ರೀ ವಿ ಜೆ ಕಾರ್ಕೂನ್ ದಂಪತಿಗಳಿಗೆ 50ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯ ಕೋರಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀ ರಘುನಂದನ್, ಶ್ರೀಮತಿ ಶೋಭಾ ಆರ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀ ರಘುನಂದನ್ ಹಾಗೂ ಶ್ರೀ ವೆಂಕಟೇಶ ನಾಯಕ್ ಬಿಳ್ಕೊಡುಗೆ ಕಾರ್ಯಕ್ರಮ



**ಬೆಂಗಳೂರು :** ದಿನಾಂಕ 29 ಮೇ 2023 ರಂದು ಸಂಯುಕ್ತ ಸಹಕಾರಿಯಲ್ಲಿ ಸುದೀರ್ಘವಾದ ಸೇವೆಯನ್ನು ಸಲ್ಲಿಸಿ, ಪ್ರಸ್ತುತ ತಮ್ಮ ಕರ್ತವ್ಯಕ್ಕೆ ವಿರಾಮ ನೀಡುತ್ತಿರುವ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ನಾಯಕ್ ಇವರಿಗೆ ಬಿಳ್ಕೊಡುಗೆ ಕಾರ್ಯಕ್ರಮದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ, ಶ್ರೀಮತಿ ಶೋಭಾ ಆರ್ ಹಾಗೂ ವ್ಯವಸ್ಥಾಪಕರಾದ ಶ್ರೀ ವಿ.ಜೆ ಕಾರಕೂನ್ ಇವರು ಉಪಸ್ಥಿತರಿದ್ದರು.

**ಬೆಳಗಾವಿ :** ದಿನಾಂಕ 26 ಮೇ 2023 ರಂದು ಸಂಯುಕ್ತ ಸಹಕಾರಿಯಲ್ಲಿ ಸುದೀರ್ಘವಾದ ಸೇವೆಯನ್ನು ಸಲ್ಲಿಸಿ, ಪ್ರಸ್ತುತ ತಮ್ಮ ಕರ್ತವ್ಯಕ್ಕೆ ವಿರಾಮ ನೀಡುತ್ತಿರುವ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಇವರ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಮಾನ್ಯರೊಂದಿಗೆ ಜೊತೆಗೂಡಿ ಕೆಲಸ ಕಾರ್ಯಗಳನ್ನು ನಿರ್ವಹಿಸಿದ ಬೆಳಗಾವಿ ಪ್ರಾಂತದ ಹಲವಾರು ಸಿಬ್ಬಂದಿಗಳು ಅವರವರ ಅನಿಸಿಕೆಗಳನ್ನು ಹಾಗೂ ಅವರಿಂದ ಪಡೆದ ಮಾರ್ಗದರ್ಶನಗಳನ್ನು, ಸಲಹೆಗಳನ್ನು, ಅಭಿಪ್ರಾಯ ರೂಪದಲ್ಲಿ ವ್ಯಕ್ತಪಡಿಸಿದರು.

ಅದೇ ರೀತಿ ಮಾನ್ಯರು ಕೂಡ ತಮ್ಮ ವೃತ್ತಿ ಜೀವನದ ಪಯಣದ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ಸಿಬ್ಬಂದಿಗಳು ವೃತ್ತಿ ಜೀವನದಲ್ಲಿ ಒಳ್ಳೆಯ ಭವಿಷ್ಯವನ್ನು ಹೊಂದಲಿ ಎಂದು ಆಶಿಸಿ ಹಲವಾರು ಮಾರ್ಗದರ್ಶನಗಳನ್ನು ನೀಡಿದರು. ಈ ಸಂದರ್ಭದಲ್ಲಿ ಮಾನ್ಯರಿಗೆ ಬೆಳಗಾವಿಯ ಪ್ರಾಂತೀಯ ಕಛೇರಿಯಿಂದ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಲಾಯಿತು.

## ನಿರ್ದೇಶಕರ ಆಡಳಿತ ಪರಿಣಿತಿ ತರಬೇತಿ 2ನೇ ತಂಡದ ತರಬೇತಿ ಮುಕ್ತಾಯ



**ಬೆಂಗಳೂರು :** ರಾಜ್ಯದ ಸೌಹಾರ್ದ ಸಹಕಾರಿಗಳ ನಿರ್ದೇಶಕರಗಳಿಗಾಗಿ 2ನೇ ತಂಡದ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮ ದಿನಾಂಕ 17, 18 ಮೇ 2023 ರ ರಂದು ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ 12 ಜಿಲ್ಲೆಗಳಿಂದ 43 ಸೌಹಾರ್ದ ಸಹಕಾರಿಗಳಿಂದ 88 ಪ್ರತಿನಿಧಿಗಳು ಭಾಗವಹಿಸಿ ಪ್ರಯೋಜನ ಪಡೆದರು.

---

### ನಿರ್ದೇಶಕರಿಗೆ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ಅಗತ್ಯ. : ಶ್ರೀ ಕೆ, ಎಸ್. ನವೀನ, ಸಹಕಾರ ಸಂಘಗಳ ಅಪರ ನಿಬಂಧಕರು, ನಿಬಂಧಕರ ಕಛೇರಿ



ಕಾರ್ಯಕ್ರಮವನ್ನು ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಗೃಹ ನಿರ್ಮಾಣ ಹಾಗೂ ಇತರೆ ಸಹಕಾರ ಸಂಘಗಳ ವಿಭಾಗದ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನ ರವರು ಉದ್ಘಾಟಿಸುತ್ತ ಇದೊಂದು ಅತ್ಯಂತ ಉತ್ತಮ ಕಾರ್ಯಕ್ರಮ. ಸಹಕಾರ ಸಂಘಗಳ ನಿರ್ದೇಶಕರುಗಳಿಗೆ ಅವರ ಕೆಲಸ ಕಾರ್ಯಗಳ ಮಾಹಿತಿ ನೀಡುವ ಅವರಿಗೆ ಹೆಚ್ಚಿನ ಜ್ಞಾನವನ್ನು ನೀಡುವ ಕಾರ್ಯಕ್ರಮ ಇದಾಗಿದೆ. ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ತರಬೇತಿ ಕಾರ್ಯಕ್ರಮಗಳ ವ್ಯವಸ್ಥೆ, ವಿಷಯಗಳ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಸಮಯ ಪ್ರಜ್ಞೆ ಇವೆಲ್ಲವುಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟು ಉತ್ತಮವಾಗಿ ತರಬೇತಿ ನಡೆಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

---

### ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದ ಅಭಿವೃದ್ಧಿಗಾಗಿ ಸಂಯುಕ್ತ ಸಹಕಾರಿಯ ಪ್ರಯತ್ನ ನಿರಂತರ : ಶ್ರೀ ನಂಜನಗೌಡ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



ಕಾರ್ಯಕ್ರಮವನ್ನು ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಗೃಹ ನಿರ್ಮಾಣ ಹಾಗೂ ಇತರೆ ಸಹಕಾರ ಸಂಘಗಳ ವಿಭಾಗದ ಅಪರ ನಿಬಂಧಕರಾದ ಶ್ರೀ ಕೆ.ಎಸ್. ನವೀನ ರವರು ಉದ್ಘಾಟಿಸುತ್ತ ಇದೊಂದು ಅತ್ಯಂತ ಉತ್ತಮ ಕಾರ್ಯಕ್ರಮ. ಸಹಕಾರ ಸಂಘಗಳ ನಿರ್ದೇಶಕರುಗಳಿಗೆ ಅವರ ಕೆಲಸ ಕಾರ್ಯಗಳ ಮಾಹಿತಿ ನೀಡುವ ಅವರಿಗೆ ಹೆಚ್ಚಿನ ಜ್ಞಾನವನ್ನು ನೀಡುವ ಕಾರ್ಯಕ್ರಮ ಇದಾಗಿದೆ. ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ತರಬೇತಿ ಕಾರ್ಯಕ್ರಮಗಳ ವ್ಯವಸ್ಥೆ, ವಿಷಯಗಳ ಆಯ್ಕೆ, ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಸಮಯ ಪ್ರಜ್ಞೆ ಇವೆಲ್ಲವುಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟು ಉತ್ತಮವಾಗಿ ತರಬೇತಿ ನಡೆಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

---

### ನಿರ್ದೇಶಕರುಗಳ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮೆಲುಕು ಹಾಕುವುದೇ ತರಬೇತಿಯ ಮುಖ್ಯ ಉದ್ದೇಶ ಶ್ರೀ ಜಗದೀಶ ಕವಟಗಿಮಠ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು



ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾಜಿ ಉಪಾಧ್ಯಕ್ಷರು ಹಾಗೂ ಪ್ರಸ್ತುತ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಸಹಕಾರ ಸಂಸ್ಥೆಗಳ ಅಭಿವೃದ್ಧಿಯಲ್ಲಿ ನಿರ್ದೇಶಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸಹಕಾರಿ ಸಂಸ್ಥೆಗಳಲ್ಲಿ ಠೇವಣಿ ಇಡಲು ನಿರ್ದೇಶಕರ ಪ್ರಭಾವ ಅವರ ಕಾರ್ಯಚಟುವಟಿಕೆಗಳು ಅವರು ಸಹಕಾರಿಯ ಬಗ್ಗೆ ಹೊಂದಿರುವ ಒಡನಾಟ ಇತ್ಯಾದಿಗಳನ್ನು ಅವಲಂಬಿಸಿ ಸದಸ್ಯರಲ್ಲಿ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿರುತ್ತದೆ. ಈ ವಿಶ್ವಾಸಾರ್ಹತೆಯನ್ನು ಉಳಿಸುವುದು ಬೆಳೆಸುವುದು ನಿರ್ದೇಶಕರ ಕರ್ತವ್ಯ. ಅದಕ್ಕಾಗಿ ಸಹಕಾರಿ ಕ್ಷೇತ್ರದ ಪ್ರಸ್ತುತ ಚಟುವಟಿಕೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಈ ತರಬೇತಿ ಎಂದು ತಿಳಿಸಿದರು.

ಸಹಕಾರ ಸಂಘಗಳ ಜಂಟಿ ನಿಬಂಧಕರು ಕಾನೂನು ಕೋಶ ನಿಬಂಧಕರ ಕಚೇರಿ ಶ್ರೀ ಜಯಪ್ರಕಾಶರವರು, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಎಮ್.ಪಿ.ಮಂಜುನಾಥ ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಶ್ರೀಮತಿ ವಿಜಯಶ್ರೀ ರವರು ಪ್ರಾರ್ಥನೆ ಮಾಡಿದರು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರವರು ಸ್ವಾಗತ ಮಾಡಿದರು. ಸಂಯುಕ್ತ ಸಹಕಾರಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಪ್ರಾಸ್ತಾವಿಕ ಭಾಷಣ ಮಾಡಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ, ಆರೋಗ್ಯಕರ ಬೆಳವಣಿಗೆ ಸಂಯುಕ್ತ ಸಹಕಾರಿಯ ಪ್ರಥಮ ಕರ್ತವ್ಯವೆಂದು ಭಾವಿಸಿ ಅದಕ್ಕಾಗಿ ರಾಜ್ಯದಾದ್ಯಂತ ಹಲವಾರು ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬರಲಾಗಿದೆ. ಉತ್ತಮ ವಿಷಯಗಳ ಆಯ್ಕೆ, ಅನುಭವಿ ಸಂಪನ್ಮೂಲ ವ್ಯಕ್ತಿಗಳ ನಿಯೋಜನೆ, ಸಮಯ ಪಾಲನೆ, ಉತ್ತಮ ವ್ಯವಸ್ಥೆಗಳು ನಮ್ಮ ವಿಶೇಷತೆ. ನಿಮ್ಮೆಲ್ಲರ ಸಹಕಾರದಿಂದ ಅದನ್ನು ಪಾಲಿಸುತ್ತ ಬಂದಿದ್ದೇವೆ. ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಅಧಿಕಾರಿ ಶ್ರೀ ವೆಂಕಟೇಶ ನಾಯಕ್ ಇವರು ವಂದನಾರ್ಪಣೆ ಮಾಡಿದರು.

## ಸಮಾರೋಪ ಕಾರ್ಯಕ್ರಮ



### ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗೆ ಅವರ ಪರಿಣಿತಿ ಅಭಿವೃದ್ಧಿ ತರಬೇತಿ ಅಗತ್ಯ

**ಶ್ರೀ ಎ. ಆರ್. ಪ್ರಸನ್ನಕುಮಾರ, ಉಪಾಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು**

ಶ್ರೀ ಎ. ಆರ್. ಪ್ರಸನ್ನಕುಮಾರ, ಮಾನ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇವರು ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಸಹಕಾರಿ ಸಂಸ್ಥೆಗಳು ಶ್ರೀ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನಗಳು. ಇವು ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಗುಣಮಟ್ಟದ ಸೇವೆಗಳನ್ನು ಒದಗಿಸಲು ಸಶಕ್ತರಾಗಲು ಈ ಸಂಸ್ಥೆಗಳ ಅಧ್ಯಕ್ಷರು ಹಾಗೂ ನಿರ್ದೇಶಕರುಗಳಿಗೆ ಅವರ ಪರಿಣಿತಿ ಅಭಿವೃದ್ಧಿ ತರಬೇತಿ ಅಗತ್ಯ ಎಂದು ತಿಳಿಸಿದರು.

### ಸಹಕಾರ ಸಂಸ್ಥೆಗಳು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನಗಳು.

**: ಶ್ರೀ ಗುರುನಾಥ ಜಾಂತೀಕರ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**



ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಈ ದೇಶದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಸಾಕಷ್ಟು ಸಾಧನೆಗಳಾಗಿವೆ. ಸಹಕಾರಿ ಕ್ಷೇತ್ರ ಬಡವರ ದೀನ ದಲಿತರ ಅಭಿವೃದ್ಧಿಯ ಆಶಾಕಿರಣಗಳು ಅವುಗಳನ್ನು ಬಲಪಡಿಸಲು ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು ಅರಿವು ಅಗತ್ಯ ಎಂದ ತಿಳಿಸಿದರು. ವ್ಯವಸ್ಥಾಪಕ ನಿರ್ದೇಶಕರು ಸಮಾರೋಪ ಭಾಷಣ ಮಾಡಿ ಶಿಬಿರಾರ್ಥಿಗಳ ಪ್ರಶ್ನೆಗಳಿಗೆ ಸಲಹೆಗಳಿಗೆ ಉತ್ತರ ನೀಡಿದರು ಪ್ರಾರಂಭದಲ್ಲಿ ಹಲವಾರು ಶಿಬಿರಾರ್ಥಿಗಳು ಶಿಬಿರದ ಬಗ್ಗೆ ತಮ್ಮ ಅಭಿಪ್ರಾಗಳನ್ನು ತಿಳಿಸುತ್ತ ಕಾರ್ಯಕ್ರಮ ಅತ್ಯಂತ ವ್ಯವಸ್ಥಿತವಾಗಿ ಮೂಡಿಬಂದಿದೆ ಇಂತಹ ಕಾರ್ಯಕ್ರಮಗಳು ಮೇಲಿಂದ ಮೇಲೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ನಡೆಯಬೇಕು ಎಂದು ತಿಳಿಸಿದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ

**ಕೊಪ್ಪಳ :** ದಿನಾಂಕ 26.05.2023 ರಂದು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ಮಾಹಿತಿ, ಬಡ್ಡಿ ದರ ನಿಗದಿಪಡಿಸುವ ಕುರಿತು ಹಾಗೂ ಕಾಮನ್ ಸಾಫ್ಟ್‌ವೇರ್, ಲೆಕ್ಕಪರಿಶೋಧನಾ ಪೂರ್ವ ಸಿದ್ಧತೆಯ ಕುರಿತು ಮಾಹಿತಿ ಸಂಯುಕ್ತ ಸಹಕಾರಿಯ ಮಾನ್ಯ ನಿದೇಶಕರಾದ ಶ್ರೀ ಜಿ ಶ್ರೀಧರ ರವರು ಹಾಗೂ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ  ನಾಗಲಿಂಗಪ್ಪ ಪತ್ತಾರ ರವರು ಸಹಕಾರಿಗಳಿಗೆ ಮಾರ್ಗದರ್ಶನ ಮಾಡಿದರು. ಕಲಬುರಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ಧರಣೆಯವರು ಸಹಕಾರಿಗಳಿಗೆ ಮಾಹಿತಿ ನೀಡಿದರು.  ತರಬೇತಿಯಲ್ಲಿ 27 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

# ರಾಜ್ಯದ ವಿವಿಧ ಕೇಂದ್ರಗಳಲ್ಲಿ ನಡೆದ "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ" (ಡಿ.ಸಿ.ಬಿ.ಎಮ್) ಸಂಪರ್ಕ ವರ್ಗದ ವರದಿ



**ಗದಗ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಕೇಂದ್ರ ಗದಗ ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮೋ ಕೋರ್ಸ್–2023 ಸಂಪರ್ಕ ವರ್ಗವನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇಲ್ಲಿ ದಿನಾಂಕ 13.05.2023 ರಂದು ಭೌತಿಕದ ಮೊದಲನೇ ಸಂಪರ್ಕ ವರ್ಗದ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಪ್ರೊ. ಅಶೋಕ್ ಎಸ್ ಶಿರಾಳಶೆಟ್ಟಿ, ಮುಖ್ಯ ಅತಿಥಿಗಳಾಗಿ ಶ್ರೀ ಹೆಚ್ ಎಸ್ ಸತೀಶ್. ಸಹಕಾರಿ ತರಬೇತುದಾರರು, ಹಾಗೂ ಸಭೆಯ ಅಧ್ಯಕ್ಷತೆಯನ್ನು ನಿವೃತ್ತ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಸ್ ಜಿ ಜೋಶಿ ಕಾರ್ಯಕ್ರಮದ ತರಬೇತಿ ಅಧಿಕಾರಿಗಳಾದ ಶ್ರೀ ವಿ ಜೆ ಕಾರಕೂನ್ ಕಾರ್ಯಕ್ರಮದ ಉಸ್ತುವಾರಿ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಶ್ರೀಮತಿ ಅಖಿಲಾ ಮಹಾಂತಶೆಟ್ಟರ್ ರವರು ಸ್ವಾಗತ ಮತ್ತು ಪ್ರಾಸ್ತಾವಿಕವನ್ನು ಶ್ರೀ ವಿ ಜೆ ಕಾರಕೂನ್ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಕಲ್ಮೇಶ ಎಸ್ ಎಂ. ಜಿಲ್ಲಾ ಸಂಯೋಜಕರು ಧಾರವಾಡ ಇವರು ನೆರವೇರಿಸಿದರು. ಗದಗ ಕೇಂದ್ರದಲ್ಲಿ ಒಟ್ಟು 107 ಅಭ್ಯರ್ಥಿಗಲ್ಲಿ 96 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ದಿನಾಂಕ 13 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು ಶ್ರೀ ಎಸ್.ಜಿ.ಜೋಶಿ, ಸಹಕಾರಿ ತರಬೇತುದಾರರು ಧಾರವಾಡ, ಎರಡನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಈ ವಿಷಯ ಕುರಿತು ಶ್ರೀ ಹೆಚ್.ಎಸ್.ಸತೀಶ ಸಹಕಾರಿ ತರಬೇತುದಾರರು, ಬೆಂಗಳೂರು ಇವರುಗಳು ಉಪನ್ಯಾಸ ನೀಡಿದರು,

ದಿನಾಂಕ 14 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ಸೂರ್ಯಕಾಂತ ರ್‍ಯಾಕಲೆ, ಹಿರಿಯ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ವಿಷಯದ ಕುರಿತು ಶ್ರೀ ರಾಮಪ್ಪ ಯರಡ್ಡಿ, ಪ್ರಾಧ್ಯಾಪಕರು, ಕ.ರಾ.ಗ್ರಾ & ಪಂ.ರಾ.ವಿ.ಗದಗ ಇವರುಗಳು ಉಪನ್ಯಾಸ ನೀಡಿದರು,

---



**ಶಿರಸಿ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸಂಯುಕ್ತಾಶ್ರಯದಲ್ಲಿ ನಡೆದ ಡಿ.ಸಿ.ಬಿ.ಎಂ ಕೋರ್ಸನ ಮೊದಲ ತಂಡದ ಸಂಪರ್ಕ ವರ್ಗ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ ಸಂಪನ್ಮೂಲ ವ್ಯಕ್ತಿಗಳು ಇವರು ನೆರೆವೇರಿಸಿದರು, ಶ್ರೀ ಮಹಂತಪ್ಪ ಎಸ್ ಎಂ. ವ್ಯವಸ್ಥಾಪಕರು, ಇವರ ಉಪಸ್ಥಿತರಿದ್ದರು.

ದಿನಾಂಕ 13 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ತರಬೇತುದಾರರು ಶಿರಸಿ ಹಾಗೂ ಎರಡನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು ಶ್ರೀ ಮಹಂತಪ್ಪ ಎಸ್. ಎಂ. ವ್ಯವಸ್ಥಾಪಕರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರುಗಳು ಉಪನ್ಯಾಸ ನೀಡಿದರು.

14 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ನಾರಾಯಣ ಹೆಗಡೆ, ಉಪಪ್ರಧಾನ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ಈ ವಿಷಯದ ಕುರಿತು ಶ್ರೀ ಪ್ರಶಾಂತ್ ಮೇರವಾಡಿ, ಪ್ರಾಧ್ಯಾಪಕರು ಕ.ರಾ.ಗ್ರಾ & ಪಂ. ರಾ.ವಿ.ಗದಗ ಇವರುಗಳು ಉಪನ್ಯಾಸ ನೀಡಿದರು, 34 ಅಭ್ಯರ್ಥಿಗಳು ಹಾಜರಿದ್ದರು



**ಜಮಖಂಡಿ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ, ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮಾ ಕೋರ್ಸ್–2023ರ ಸಂಪರ್ಕ ವರ್ಗ ವನ್ನು ಶ್ರೀ ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆ, ಸಿದ್ಧಾಪುರ, ತಾ. ಜಮಖಂಡಿ ಇಲ್ಲಿ ದಿನಾಂಕ 27 ಮೇ 2023 ಇಲ್ಲಿ ಆಯೋಜಿಸಲಾಗಿತ್ತು. ಪ್ರಥಮ ಸಂಪರ್ಕ ವರ್ಗದ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಎನ್.ಪಾಟೀಲ, ಇವರು ನೆರವೇರಿಸಿದರು ಮತ್ತು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಜಮಖಂಡಿ ಇದರ ಮಾನ್ಯ ನಿರ್ದೇಶಕರಾದ ಶ್ರೀ ರಾಜೇಂದ್ರಕುಮಾರ ಎಸ್. ಗುಡಗುಂಟಿ, ಶ್ರೀ ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ವಾಯ್.ಬಿ.ಹೊಟ್ಟೆ, ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಜಮಖಂಡಿ ಇದರ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಮಹೇಶ ಮಠಪತಿ, ಸಂಯುಕ್ತ ಸಹಕಾರಿಯ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಸಂಯುಕ್ತ ಸಹಕಾರಿಯ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಸಂಯುಕ್ತ ಸಹಕಾರಿಯ ಮಾನ್ಯ ಹಿರಿಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರುಗಳು ಉಪಸ್ಥಿತರಿದ್ದರು. ಜಮಖಂಡಿ ಕೇಂದ್ರದಲ್ಲಿ ಒಟ್ಟು 48 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ.

---



**ಬೆಲ್ಲದ ಬಾಗೇವಾಡಿ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಹಯೋಗದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮಾ ಕೋರ್ಸ್–2023 ರ ಭೌತಿಕ ಪ್ರಥಮ ಸಂಪರ್ಕ ವರ್ಗವನ್ನು ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ ಬಾಗೇವಾಡಿ ಇಲ್ಲಿ ದಿನಾಂಕ 27.05.2023 ರಂದು ಆಯೋಜಿಸಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಎಲ್ಲ ಅತಿಥಿ ಗಣ್ಯಮಾನ್ಯರುಗಳು ಸೇರಿ ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆರ್.ಬಿ.ಮುನ್ನೊಳ್ಳಿ, ಮಾನ್ಯ ಉಪಾಧ್ಯಕ್ಷರು, ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್., ಬೆಲ್ಲದ ಬಾಗೇವಾಡಿ ಇವರು ವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳಾಗಿ ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್., ಬೆಲ್ಲದ ಬಾಗೇವಾಡಿ ಇದರ ಮಾನ್ಯ ನಿರ್ದೇಶಕರುಗಳಾದ ಶ್ರೀ ಆರ್. ಟಿ.ಶಿರಾಳಕರ, ಶ್ರೀ ಡಾ. ಎಮ್. ಎಸ್. ಮೂನ್ನೊಳ್ಳಿ, ಆಡಳಿತ ಸಲಹೆಗಾರರು ಶ್ರೀ ಎಂ.ಕೆ.ಅಮ್ಮಣಗಿ, ಪ್ರಧಾನ ವ್ಯವಸ್ಥಾಪಕರು ಶ್ರೀ ಸುನೀಲ ಎಸ್. ಬೆಲ್ಲದ ಹಾಗೂ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರುಗಳು ಉಪಸ್ಥಿತರಿದ್ದರು. ಸಂಪರ್ಕ ವರ್ಗ ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಇವರು ಹೇಳಿದರು. ಮತ್ತು ಸ್ವಾಗತ ಭಾಷಣವನ್ನು ಶ್ರೀ ವೃಷಭನಾಥ ಪರಪ್ಪನವರ, ಕಿರಿಯ ವ್ಯವಸ್ಥಾಪಕರು, ನಿರೂಪಣೆಯನ್ನು ಶ್ರೀಮತಿ ಮಲ್ಲಮ್ಮ ದೇಗಾಂವ, ಸಹಾಯಕಿ, ಹಾಗೂ ವಂದನಾರ್ಪಣೆಯನ್ನು ಶ್ರೀ ಶಿವಕಾಂತ ಎನ್, ಜಿಲ್ಲಾ ಸಂಯೋಜಕರು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಉಸ್ತುವಾರಿ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು. ಬೆಲ್ಲದ ಬಾಗೇವಾಡಿ ಕೇಂದ್ರದಲ್ಲಿ ಒಟ್ಟು 61 ಅಭ್ಯರ್ಥಿಗಳಲ್ಲಿ 58 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ.

ದಿನಾಂಕ 27 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ಶರಣಗೌಡ ಜಿ.ಪಾಟೀಲ, ವ್ಯವಸ್ಥಾಪಕ ನಿದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಎರಡನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು ಶ್ರೀ ಎಸ್.ಜಿ.ಕುಲಕರ್ಣಿ, ಬ್ಯಾಂಕಿಂಗ್ ತಜ್ಞರು ಬೆಂಗಳೂರು ಇವರುಗಳು ಉಪನ್ಯಾಸ ನೀಡಿದರು ಹಾಗೂ ಮೂರನೆ ಅವಧಿ ಯೋಗ ಶಿಕ್ಷಣವನ್ನು ಶ್ರೀ ಬಸವರಾಜ, ಯೋಗ ಶಿಕ್ಷಕರು ಸಂಕೇಶ್ವರ ಇವರು ಉಪನ್ಯಾಸ ನೀಡಿದರು..

ದಿನಾಂಕ 28 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ರಘುನಂದನ ಕೆ. ಉಪಪ್ರಧಾನ ವ್ಯವಸ್ಥಾಪಕರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ವಿಷಯದ ಕುರಿತು ಶ್ರೀ ಅಭಯ ಗಸ್ತಿ, ಪ್ರಾಧ್ಯಾಪಕರು ಕ.ರಾ.ಗ್ರಾ & ಪಂ.ರಾ.ವಿ.ಗದಗ ಇವರುಗಳು ಉಪನ್ಯಾಸ ನೀಡಿದರು, ನಂತರದಲ್ಲಿ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ನಡೆಸಲಾಯಿತು.

ಎರಡನೇ ದಿನದ ಸಂಪರ್ಕ ವರ್ಗಕ್ಕೆ 61 ಅಭ್ಯರ್ಥಿಗಳಲ್ಲಿ 58 ಜನ ಹಾಜರಿದ್ದರು.



**ಉಡುಪಿ :** ಕರ್ನಾಟಕ ರಾಜ್ಯ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಗ್ ಮ್ಯಾನೇಜ್ ಮೆಂಟ್ ಡಿಪ್ಲೋಮೋ ಕೋರ್ಸ್–2023 ಇದರ ಪ್ರಥಮ ಸಂಪರ್ಕ ವರ್ಗವನ್ನು ಚೇತನ ಪ್ರೌಡಶಾಲೆ ,ಹಂಗಾರಕಟ್ಟೆ , ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ ಇಲ್ಲಿ ಆಯೋಜನೆ ಮಾಡಲಾಗಿತ್ತು. ಮೊದಲನೇ ಸಂಪರ್ಕ ವರ್ಗದ ಕಾರ್ಯಕ್ರಮವನ್ನು ಉಡುಪಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಹಂಪಾರು ಜಗನ್ನಾಥ್ ಶೆಟ್ಟಿ ಇವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಇದರ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್ ಕೆ ವಹಿಸಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್ ರವರು ನುಡಿದರು ಕಾರ್ಯಕ್ರಮದ ವಂದಾನಾರ್ಪಣೆಯನ್ನು ವ್ಯವಸ್ಥಾಪಕರಾದ ಶ್ರೀ ಪಾಲ್‌ರಾಜ್ ಹಾಗೂ ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ರವರು ನಡೆಸಿಕೊಟ್ಟರು. ಉಡುಪಿ ಕೇಂದ್ರದಲ್ಲಿ ಒಟ್ಟು 66 ಅಭ್ಯರ್ಥಿಗಲ್ಲಿ 54 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ದಿನಾಂಕ 27 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ವಿಷಯದ ಕುರಿತು ಶ್ರೀ ಶಿವಕುಮಾರ್ ಬಿರಾದಾರ್, ಮೈಸೂರು ಪ್ರಾಂತೀಯ ಅಧಿಕಾರಿಗಳು ಎರಡನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ಈ ವಿಷಯ ಕುರಿತು ಶ್ರೀ ವಿಜಯ್ ಬಿ.ಎಸ್ ಜಿಲ್ಲಾ ಸೌಹಾರ್ದ ಸಂಯೋಜಕರು, ಉಡುಪಿ ಇವರುಗಳು ಉಪನ್ಯಾಸ ನೀಡಿದರು,

ದಿನಾಂಕ 28 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ವಿಷಯದ ಕುರಿತು ಶ್ರೀಮತಿ ಸವಿತಾ, ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ವಿಷಯದ ಕುರಿತು ಶ್ರೀಮತಿ ಸವಿತಾ, ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಉಪನ್ಯಾಸ ನೀಡಿದರು,



**ಶಿವಮೊಗ್ಗ :** ದಿನಾಂಕ 27.05.2023 ರಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇವರುಗಳ ಸಹಯೋಗದಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೊಮೋ ಕೋರ್ಸ್–2023ರ ಭೌತಿಕ ಪ್ರಥಮ ಸಂಪರ್ಕ ವರ್ಗವನ್ನು ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ, ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಕೆ.ವಿ. ರವಿಕುಮಾರ್ ಹಾಗೂ ವೇದಿಕೆಯ ಎಲ್ಲಾ ಅತಿಥಿಗಳು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಘುರಾಮ್, ಮಾನ್ಯ ನಿರ್ದೇಶಕರು, ಹೊಯ್ಸಳ ಸೌಹಾರ್ದ ಸಹಕಾರಿ ಸಂಘ ನಿ, ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ. ಜೋಶಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕರಾದ ಶ್ರೀ ಮಹಾಂತಪ್ಪ, ಇಂಜಿನಿಯರ್ ಶ್ರೀ ವಿಕ್ರಾಂತ್ ಪಾಟೀಲ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ಎಸ್. ಮತ್ತು ಶ್ರೀ ನಾಗರಾಜು ಜಿ.ಹೆಚ್. ಇವರು ಉಪಸ್ಥಿತರಿದ್ದರು. ಒಟ್ಟು 64 ಅಭ್ಯರ್ಥಿಗಳಲ್ಲಿ 53 ಅಭ್ಯರ್ಥಿಗಳು ಭಾಗವಹಿಸಿದ್ದರು.



**ಬೆಂಗಳೂರು :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಕೇಂದ್ರ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಗದಗನಲ್ಲಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮೋ ಕೋರ್ಸ್–2023 ಸಂಪರ್ಕ ವರ್ಗವನ್ನು ಸೌಹಾರ್ದ ಸಹಕಾರಿ ಸೌಧ, ಮಾರ್ಗೋಸ್ ರಸ್ತೆ, ಬೆಂಗಳೂರು ಇಲ್ಲಿ ದಿನಾಂಕ 13.05.2023 ರಂದು ಭೌತಿಕದ ಮೊದಲನೇ ಸಂಪರ್ಕ ವರ್ಗದ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರಿಗಳ ಅಪರ ನಿಬಂಧಕರು (ನಿ) ಬೆಂಗಳೂರು ಮುಖ್ಯ ಅತಿಥಿಗಳಾಗಿ ಶ್ರೀ ನಾರಾಯಣ ಹೆಗ್ಡೆ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಹಾಗೂ ಶ್ರೀ ಶ್ರೀಕಾಂತ್ ಬರುವೆ ಮಾನ್ಯ ಉಪಪ್ರದಾನ ವ್ಯವಸ್ಥಾಪಕರು ಬೆಂಗಳೂರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಬಿ.ಎಸ್. ಗುಂಡೂರಾವ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಕಾರ್ಯಕ್ರಮದ ತರಬೇತಿ ಅಧಿಕಾರಿಗಳಾದ ಶ್ರೀಮತಿ ಸವಿತ ಎಸ್. ಇ. ಕಾರ್ಯಕ್ರಮದ ಉಸ್ತುವಾರಿ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾ–ರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು. ಪ್ರಾರ್ಥನೆಯನ್ನು ಶ್ರೀಮತಿ ಹರ್ಷಪ್ರಭ ರವರು ನೆರವೇರಿಸಿದರು ಸ್ವಾಗತ ಭಾಷಣವನ್ನು ಶ್ರೀ ವೆಂಕಟೇಶ್ ನಾಯ್ಕ್ ಪ್ರಾಸ್ತಾವಿಕವನ್ನು ಶ್ರೀ ಪಾಲರಾಜರವರು ನಡೆಸಿಕೊಟ್ಟರು ನಿರೂಪಣೆಯನ್ನು ಶ್ರೀ ಯದುನಂದನ್ ಎಸ್ ಇವರು ವಂದನಾರ್ಪಣೆಯನ್ನು ಶ್ರೀ ಅನಿಲಕುಮಾರ್ ರವರು ನೆರವೇರಿಸಿದರು. ಬೆಂಗಳೂರು ಕೇಂದ್ರದಲ್ಲಿ ಒಟ್ಟು 80 ಅಭ್ಯರ್ಥಿಗಲ್ಲಿ 65 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ. ದಿನಾಂಕ 13 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ ವಿಷಯದ ಕುರಿತು ಶ್ರೀ ಎಚ್ ಎಸ್ ನಾಗರಾಜಯ್ಯ ಮಾನ್ಯ ಸಹಕಾರಿಗಳ ಅಪರ ನಿಬಂಧಕರು(ನಿ) ಬೆಂಗಳೂರು ಎರಡನೇಯ ಅವಧಿಗೆ ಸಹಕಾರಿ ಪತ್ತು ನಿರ್ವಹಣೆ ಈ ವಿಷಯ ಕುರಿತು ಶ್ರೀ ಶ್ರೀಕಾಂತ್ ಬರುವೆ ಉಪಪ್ರದಾನ ವ್ಯವಸ್ಥಾಪಕರು ಬೆಂಗಳೂರು. ಇವರುಗಳು ಉಪನ್ಯಾಸ ನೀಡಿದರು, ಹಾಗೂ ಯೋಗ ಶಿಕ್ಷಣವನ್ನು ಶ್ರೀಮತಿ ದಾಕ್ಷಾಯಿಣಿ ಯೋಗ ತರಬೇತಿದಾರರು ಇವರು ನೆರವೇರಿಸಿದರು.

ದಿನಾಂಕ 14 ಮೇ 2023ರಂದು ಮೊದಲನೇಯ ಅವಧಿಗೆ ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು ವಿಷಯದ ಕುರಿತು ಶ್ರೀ ಶಶಿಧರ ಎಲೆ ಮಾನ್ಯ ಅಪರ ನಿಬಂಧಕರು (ನಿ) ಬೆಂಗಳೂರು ಎರಡನೇಯ ಅವಧಿಗೆ ಸಾಂಸ್ಥಿಕ ಅಧ್ಯಯನ ವಿಷಯದ ಕುರಿತು ಶ್ರೀಮತಿ ಲಲಿತಾ ಪಾಟೀಲ್ ಮಾನ್ಯ ಪ್ರಾಧ್ಯಾಪಕರು ಬೆಂಗಳೂರು ಇವರುಗಳು ಉಪನ್ಯಾಸ ನೀಡಿದರು. ಬೆಂಗಳೂರು ಕೇಂದ್ರದಲ್ಲಿ ಒಟ್ಟು 80 ಅಭ್ಯರ್ಥಿಗಲ್ಲಿ 60 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ.



**ಬಳ್ಳಾರಿ :** ಕರ್ನಾಟಕ ರಾಜ್ಯ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಹಯೋಗದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ–2023 ಪ್ರಥಮ ಸಂಪರ್ಕ ವರ್ಗದ ತರಗತಿಯ ದಿನಾಂಕ 27.05.2023 ರಂದು ಬಳ್ಳಾರಿ ಬಿಸಿನೆಸ್ ಕಾಲೇಜು, ಸಿರುಗುಪ್ಪ ರಸ್ತೆ, ಬಳ್ಳಾರಿ ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನಾ ಕಾರ್ಯಕ್ರಮವನ್ನು ಬಳ್ಳಾರಿ ಬಿಸಿನೆಸ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಡಾ॥ ರಾಮಚಂದ್ರ ಯವರು ಹಾಗೂ ಎಲ್ಲಾ ಅತಿಥಿಗಳ ಗಣ್ಯಮಾನ್ಯರುಗಳ ನೆರವೆರಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಸತ್ಯನಾರಾಯಣ ಮೇಘ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಭಾಗವಹಿಸಿದ್ದರು.

ಸಂಪರ್ಕ ವರ್ಗ ಉದ್ಘಾಟನಾ ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರೀಮತಿ ಶೋಭ ಆರ್ ಉಪಪ್ರಧಾನ ವ್ಯವಸ್ಥಾಪಕರು ನೆರವೆರಿಸಿದರು. ಸ್ವಾಗತವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಕೋರಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ರವಿಕುಮಾರ ಕೆ.ಆರ್ ಜಿಲ್ಲಾ ಸಂಯೋಜಕರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಉಸ್ತುವಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಬಳ್ಳಾರಿ ಕೇಂದ್ರದಲ್ಲಿ 45 ಅಭ್ಯರ್ಥಿಗಳಲ್ಲಿ 34 ಅಭ್ಯರ್ಥಿಗಳು ಭಾಗವಹಿಸಿದ್ದರು.




**ಸಿಂಧನೂರು :** ಕರ್ನಾಟಕ ರಾಜ್ಯ ಗ್ರಾಮೀಣಭಿವೃದ್ಧಿ ಹಾಗೂ ಪಂಚಾಯತ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಹಯೋಗದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ–2023 ಪ್ರಥಮ ಸಂಪರ್ಕ ವರ್ಗದ ತರಗತಿಯ ದಿನಾಂಕ 27.05.2023 ರಂದು ಶ್ರೀ ಕೃಷ್ಣ ದೇವರಾಯ ವಿದ್ಯಾಸಂಸ್ಥೆ, ಹೊಸಳ್ಳಿ ಕ್ಯಾಂಪ್, ಸಿಂಧನೂರು ಇಲ್ಲಿ ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನಾ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ಹಾಗೂ ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯಮಾನ್ಯರು ನೆರವೆರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿಯವರು ನೇರವೆರಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಮಲ್ಲಯ್ಯ, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಿಂಧನೂರು ಉಪವಿಭಾಗ ಸಿಂಧನೂರು, ಶ್ರೀ ಲಿಯಾಕತ್ ಅಲಿ, ನಿವೃತ್ತ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಶ್ರೀಮತಿ ಚಂದ್ರಕಲಾ ಪ್ರಕಾಶ, ಮಾನ್ಯ ಉಪ ಪ್ರಾಂಶುಪಾಲರು, ಶ್ರೀ ಕೃಷ್ಣದೇವರಾಯ ವಿದ್ಯಾ ಸಂಸ್ಥೆ, ಹೊಸಹಳ್ಳಿ ಸಿಂಧನೂರು, ಇತರರು ಸಂಪನ್ಮೂಲ ವ್ಯಕ್ತಿಗಳು ಉಪಸ್ಥಿತರಿದ್ದರು.

ಸಂಪರ್ಕ ವರ್ಗದ ಉದ್ಘಾಟನಾ ಕಾರ್ಯಕ್ರಮದ ಪ್ರಾಸ್ತವಿಕ ನುಡಿ, ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ನಟರಾಜ ಜಿಲ್ಲಾ ಸಂಯೋಜಕರು ನೇರವೆರಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾ–ರಿಯ ಉಸ್ತುವಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತ–ರಿದ್ದರು. ಸಿಂಧನೂರು ಕೇಂದ್ರದಲ್ಲಿ 52 ಅಭ್ಯರ್ಥಿಗಳಲ್ಲಿ 46 ಅಭ್ಯರ್ಥಿಗಳು ಭಾಗವಹಿಸಿದ್ದರು.

---



**ಹೊಸಪೇಟೆ :** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ನಡೆಸಲಾಗುತ್ತಿರುವ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮೋ ಕೋರ್ಸ್–2023 ಸಂಪರ್ಕ ವರ್ಗ ವನ್ನು ಮೈರಾಡ್ ವಂಗಿರ, ತರಬೇತಿ ಕೇಂದ್ರ, ಡಾಣಾಪುರ, ಹೊಸಪೇಟೆ ಇಲ್ಲಿ ದಿನಾಂಕ 13.05.2023 ರಂದು ಮೊದಲನೇ ಸಂಪರ್ಕ ವರ್ಗದ ಕಾರ್ಯಕ್ರಮದ ಉದ್ಘಾಟನೆ ಹಾಗೂ ಅಧ್ಯಕ್ಷತೆಯನ್ನು ಶ್ರೀ ನಂಜನಗೌಡ್ರು, ಅಧ್ಯಕ್ಷರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀಮತಿ ಶೋಭ ಮಾನ್ಯ ಉಪ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ಆಗಮಿಸಿದ್ದರು. ಕಾರ್ಯಕ್ರಮದ ಉಸ್ತುವಾರಿ ಅಧಿಕಾರಿಗಳು ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು. ಸಂಪರ್ಕ ವರ್ಗ ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಶ್ರೀ ಶಿವಕುಮಾರ ಬಿರಾದರ್ ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ರವರು, ಸ್ವಾಗತ ಭಾಷಣವನ್ನು ಶ್ರೀ ಮಲ್ಲಿನಾಥ ರವರು, ಹಾಗೂ ಪ್ರಾರ್ಥನೆಯನ್ನು ಕುಮಾರಿ ಶ್ವೇತರವರು, ನಿರೂಪಣೆಯನ್ನು ಶ್ರೀ ರವಿಕುಮಾರ್ ನೆರವೇರಿಸಿದರು. ಹೊಸಪೇಟೆ ಕೇಂದ್ರದಲ್ಲಿ ಒಟ್ಟು 58 ಅಭ್ಯರ್ಥಿಗಲ್ಲಿ 34 ಅಭ್ಯರ್ಥಿಗಳು ಭಾಗವಹಿಸಿರುತ್ತಾರೆ.

---



**ಹಾಸನ :** ದಿನಾಂಕ: 26.05.2023 ರಂದು ಹಾಸನ ಜಿಲ್ಲಾ ಸೌಹಾರ್ದ ಸಹಕಾರಿಗಳ "ವಿಷಯಾಧಾರಿತ ತರಬೇತಿ" ಯ ಉದ್ಘಾಟನೆಯನ್ನು ಶ್ರೀ. ಎಸ್. ಶಂಕರ್ ರವರು, ಮಾನ್ಯ ಉಪನಿಬಂಧಕರು, ಹಾಸನ ಜಿಲ್ಲೆ, ಹಾಸನ ಇವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ಶ್ರೀ. ಶ್ರೀಧರ ಸೋಮಯಾಜಿ ರವರು, ಸಂಪನ್ಮೂಲ ವ್ಯಕ್ತಿಗಳು, ಉಡುಪಿ ಜಿಲ್ಲೆ, ಶ್ರೀಮತಿ. ಲಲಿತ ರವರು, ಸಹಾಯಕ ನಿರ್ದೇಶಕರು, ಸಹಕಾರಿಗಳ ಲೆಕ್ಕ ಪರಿಶೋಧನೆ ಇಲಾಖೆ, ಹಾಸನ, ಶ್ರೀಮತಿ. ಚೂಡಾಮಣಿ ರವರು, ಹಿರಿಯ ಲೆಕ್ಕಾಧಿಕಾ–ರಿಗಳು, ಹಾಸನ, ಸ್ಥಳೀಯ ಸಹಕಾರಿಗಳ ಆಡಳಿತ ಮಂಡಳಿ ನಿರ್ದೇಶಕರು & ಸಿಇಓಗಳು ಮತ್ತು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ ಜಿಲ್ಲೆಯ 29 ಸೌಹಾರ್ದ ಸಹಕಾರಿಗಳ 45 ಪ್ರತಿನಿಧಿಗಳು ಮತ್ತು 15 ಇತರೆ ಸೇರಿ ಒಟ್ಟು 60 ಜನರು ಹಾಜರಿದ್ದರು.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

"ಸೌಹಾರ್ದ ಸಹಕಾರಿ ಸೌಧ" ನಂ.68, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು

www.souharda.coop, Ph: 080-23378375-80, Email:souharda@souharda.coop

ಪತ್ರ ಸಂಖ್ಯೆ:ಸಂ.ಸ./ಆ.ವಿ/ಸು-01/2023-24 ದಿನಾಂಕ: 22/05/2023

## ಮಾಹಿತಿ ಸುತ್ತೋಲೆ

ಇವರಿಗೆ,

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ.

ಮಾನ್ಯ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರು.

ಮಾನ್ಯರೇ,

**ವಿಷಯ: ಆರ್‌ಬಿಐ ಸುತ್ತೋಲೆ 2000 ರೂ ನೋಟುಗಳನ್ನು ಹಿಂದಕ್ಕೆ ಪಡೆದಿರುವ ಕುರಿತು.**

**ಉಲ್ಲೇಖ: ಆರ್‌ಬಿಐ ಪತ್ರಿಕಾ ಪ್ರಕಟಣೆ ಸಂಖ್ಯೆ. 2023-24/257, ದಿನಾಂಕ 19/05/2023 ದಿನಾಂಕ: 22/05/2023**

ದಿನಾಂಕ 19.05.2023 ರಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೊರಡಿಸಿದ ಪತ್ರಿಕಾ ಪ್ರಕಟಣೆಯನ್ವಯ 2000 ರೂ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ನಿರ್ಧಾರ ಮಾಡಿರುವುದಾಗಿ ಘೋಷಿಸಿದೆ. ಇದರ ಕುರಿತು ಅನೇಕ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ದೂರವಾಣಿ ಮೂಲಕ ತಮ್ಮ ಸಲಹೆ/ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಈ ಹಿನ್ನಲೆಯಲ್ಲಿ ಸಹಕಾರಿಗಳ ಅನುಕೂಲ ಮತ್ತು ಮಾರ್ಗದರ್ಶನಕ್ಕಾಗಿ ಈ ಕೆಳಗಿನ ಮಾಹಿತಿಯನ್ನು ಸಂಯುಕ್ತ ಸಹಕಾರಿ ಮೂಲಕ ನೀಡಲಾಗುತ್ತಿದೆ.

1. ಭಾರತೀಯ ರಿಸರ್ವ್ ಬ್ಯಾಂಕ್ 'ಕ್ಲೀನ್ ನೋಟ್ ಪಾಲಿಸಿ' ಅಡಿ ರೂ.2000/- ನೋಟನ್ನು ಹಿಂಪಡೆಯಲಾಗಿದೆ. ಆದರೆ ರೂ.2000/- ನೋಟನ್ನು ಅಮಾನ್ಯಗೊಳಿಸಿರುವುದಿಲ್ಲ ಎಂದು ಆರ್‌ಬಿಐ ತಿಳಿಸಿರುತ್ತದೆ. ಆದ್ದರಿಂದ 2000 ರೂ ನೋಟುಗಳನ್ನು ಚಲಾವಣೆ (Circulation) ಮಾಡದಂತೆ ಆರ್‌ಬಿಐ ಸೂಚಿಸಿದೆ.
2. ಆದರೆ ಸಾರ್ವಜನಿಕರು ತಾವು ಹೊಂದಿರುವ ನೋಟುಗಳನ್ನು ಬ್ಯಾಂಕ್‌ಗಳಲ್ಲಿ ವಿನಿಮಯ(exchange) ಮಾಡಲು ಇಲ್ಲವೆ ಖಾತೆಗಳಲ್ಲಿ ಜಮೆ ಮಾಡಲು ದಿನಾಂಕ ಮೇ 23, 2023 ರಿಂದ ಸೆಪ್ಟೆಂಬರ್ 30, 2023ರವರೆಗೂ ಕಾಲಾವಕಾಶ ನೀಡಲಾಗಿದೆ.
3. ಆರ್‌ಬಿಐ ನಿರ್ಧಾರದನ್ವಯ ಸೌಹಾರ್ದ ಸಹಕಾರಿಗಳ ಸದಸ್ಯರು ಕೂಡ ಯಾವುದೇ ಬ್ಯಾಂಕುಗಳಲ್ಲಿ ಅಥವಾ ಆರ್‌ಬಿಐನ 19 ಪ್ರಾಂತೀಯ ಕಛೇರಿಗಳಲ್ಲಿ ಒಂದು ದಿನಕ್ಕೆ ಗರಿಷ್ಠ 20,000 ರೂ ಅಂದರೆ 2000 ರೂ ಮುಖಬೆಲೆಯ 10 ನೋಟುಗಳನ್ನು ಇತರೇ ಮೌಲ್ಯದ ನೋಟುಗಳಿಗೆ ವಿನಿಮಯ(exchange) ಮಾಡಿಕೊಳ್ಳಬಹುದಾಗಿದೆ.
4. ಆರ್‌ಬಿಐ ಹೊರಡಿಸಿದ ಸುತ್ತೋಲೆಯಂತೆ ದೇಶದಲ್ಲಿ 2,000 ರೂ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯಲಾಗುತ್ತಿದೆಯೇ ಹೊರತು 2016ರಲ್ಲಿ ನೋಟು ಅಮಾನ್ಯಕರಣ ಆದ ಹಾಗೇ ರದ್ದು ಮಾಡುತ್ತಿಲ್ಲ. ಆದ್ದರಿಂದ ಸೌಹಾರ್ದ ಸಹಕಾರಿಗಳು ತಮ್ಮ ವ್ಯವಹಾರದಲ್ಲಿ ಸದಸ್ಯರಿಂದ 2,000 ರೂ ಮುಖಬೆಲೆಯ ನೋಟುಗಳನ್ನು ದಿನಾಂಕ 30/09/2023 ರವರೆಗೆ ಸ್ವೀಕರಿಸಲು ಯಾವುದೇ ನಿರ್ಬಂಧವಿರುವುದಿಲ್ಲ. ಸೌಹಾರ್ದ ಸಹಕಾರಿಗಳು ಆರ್‌ಬಿಐ ತಿಳಿಸಿರುವಂತೆ ದಿನಾಂಕ 23/05/2023 ರಿಂದ 30/09/2023 ರವರೆಗೆ ಮಾತ್ರ ಸದಸ್ಯರಿಂದ ಠೇವಣಿ ಮತ್ತು ಸಾಲದ ಮರುಪಾವತಿಯನ್ನು ಸದಸ್ಯರ ಸಂಪೂರ್ಣ KYC (PAN, Aadhar card, Address Proof, Mobile number) ಪಡೆಯುವ ಮೂಲಕ ಅವರವರ ಖಾತೆಗೆ ಜಮೆ ಮಾಡಿಕೊಳ್ಳುವುದು ಅಥವಾ ಗರಿಷ್ಠ 20,000 ರೂ ಮೀರದಂತೆ ನಗದು ರೂಪದಲ್ಲಿ ಪಡೆಯಬಹುದು.

   ಆದರೆ ಈ ರೀತಿ ಸ್ವೀಕರಿಸುವಾಗ ಸದಸ್ಯರ ಕೆವೈಸಿ ದಾಖಲೆಗಳನ್ನು ಕಡ್ಡಾಯವಾಗಿ ಪಡೆಯುವುದು ಮತ್ತು ನೋಟುಗಳ ಡೆನಾಮಿನೇಷನ್‌ಗಳ ಸಂಖ್ಯೆಯನ್ನು ನಮೂದಿಸುವುದು ಹಾಗೂ ಆಯಾ ದಿನವೇ ತಮ್ಮ ಸಹಕಾರಿಯ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಬೇಕು. ಮತ್ತು 2000 ರೂ ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ಬಳಸುವಂತಿಲ್ಲ.

5. ಆರ್‌ಬಿಐ ಸುತ್ತೋಲೆಯಂತೆ ಯಾವುದೇ ಬ್ಯಾಂಕುಗಳು ಮಾತ್ರ ಒಮ್ಮೆಗೆ 20,000 ರೂ ಮೌಲ್ಯದ ನೋಟುಗಳನ್ನು ವಿನಿಮಯ(exchange) ಮಾಡಬಹುದು. ಆದ್ದರಿಂದ ಯಾವುದೇ ಸೌಹಾರ್ದ ಸಹಕಾರಿಗಳು (18 ಸೌಹಾರ್ದ ಸಹಕಾರಿ ಬ್ಯಾಂಕುಗಳು ಹೊರತುಪಡಿಸಿ) 2,000 ರೂ ಮುಖಬೆಲೆಯ ನೋಟುಗಳನ್ನು ವಿನಿಮಯ(exchange) ಮಾಡುವಂತಿಲ್ಲ.
6. ಈ ರೀತಿಯಾದ ಸಂದರ್ಭದಲ್ಲಿ ಸದಸ್ಯರಿಂದ ಸಂಗ್ರಹಿಸಿದ ಠೇವಣಿಗಳ ಕೆವೈಸಿ ಮಾಹಿತಿಗಳನ್ನು ಯಾವುದೇ ಪ್ರಾಧಿಕಾರವು ಕೇಳಿದ್ದಲ್ಲಿ ಒದಗಿಸಬೇಕಾಗುತ್ತದೆ.

**ವಂದನೆಗಳೊಂದಿಗೆ,**

Karnataka State Souharda Federal Cooperative Ltd. Reg. No. RSR / SOU / ACT / 136 Regn. 051 / 2001-02 dated 04-01-2002 Bangalore

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಚಾಮರಾಜನಗರ :** ದಿನಾಂಕ 20.05.2023 ರಂದು ಚಾಮರಾಜನಗರ ಜಿಲ್ಲಾ ಸೌಹಾರ್ದ ಸಹಕಾರಿಗಳ "ವಿಷಯಾಧಾರಿತ ತರಬೇತಿ" ಯ ಉದ್ಘಾಟನೆಯನ್ನು ಶ್ರೀಮತಿ ಭಾರತಿ ಜಿ. ಭಟ್ ರವರು, ಮಾನ್ಯ ಪ್ರಾಂತೀಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೆರವೇ–ರಿಸಿದರು. ಇದೇ ಸಂದರ್ಭದಲ್ಲಿ ವೇದಿಕೆಯಲ್ಲಿ ಶ್ರೀ ಶಿವಕುಮಾರ ಬಿರಾದಾರ ರವರು, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು, ಶ್ರೀ ಮಹಂತಪ್ಪ ರವರು, ವ್ಯವಸ್ಥಾಪಕರು, ಕೇಂದ್ರ ಕಛೇರಿ, ಬೆಂಗಳೂರು, ಶ್ರೀ ವೀರಭದ್ರಸ್ವಾಮಿ ರವರು, ಅಧ್ಯಕ್ಷರು, ಶ್ರೀ ಅಕ್ಷಯ ಶ್ರೀ ಸೌಹಾರ್ದ ಕ್ರೆಡಿಟ್ ಕೋ– ಆಪರೇಟಿವ್ ಲಿ., ಚಾಮರಾಜನಗರ ಮತ್ತು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

1ನೇ ಅವಧಿಯಲ್ಲಿ "ಸಾಲ ವಸೂಲಾತಿ ಕ್ರಮಗಳು & ದಾವಾ ಪಂಚಾಯತಿ ನ್ಯಾಯಾಲಯ" ವಿಷಯಗಳ ಕುರಿತು ಶ್ರೀ ಮಹಂತಪ್ಪ ಇವರು ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿಯನ್ನು ನೀಡಿದರು. 2ನೇ ಅವಧಿಯಲ್ಲಿ "ಮಾನಸಿಕ ಆರೋಗ್ಯ & ಒತ್ತಡ ನಿವಾರಣೆ" ವಿಷಯದ ಕುರಿತು ಶ್ರೀ ಚಂದ್ರಶೇಖರ. ಎಸ್, ಮುಖ್ಯಸ್ಥರು, ಸಾರ್ವಜನಿಕ ಸಂಪರ್ಕ ವಿಭಾಗ, ಪ್ರೇರಣಾ ಆಸ್ಪತ್ರೆ, ಮೈಸೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ ಜಿಲ್ಲೆಯ 21 ಸೌಹಾರ್ದ ಸಹಕಾರಿಗಳ 31 ಪ್ರತಿನಿಧಿಗಳು 9 ಇತರೆ ಸೇರಿ ಒಟ್ಟು 40 ಜನರು ಹಾಜರಿದ್ದರು.




**ದಕ್ಷಿಣ ಕನ್ನಡ :** ದಿನಾಂಕ 23.05.2023 ರಂದು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಗಾರವನ್ನು ಹೋಟೆಲ್ ಶ್ರೀನಿವಾಸ, ಮಂಗಳೂರು ಇಲ್ಲಿ ಆಯೋಜನೆ ಮಾಡಲಾಯಿತು. ಸದರಿ ಕಾರ್ಯಗಾರದ ಉದ್ಘಾಟನೆಯನ್ನು ದಕಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಸುರೇಶ್ ರೈ ರವರು ನೇರವೆರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು

ಪ್ರಥಮ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಲಾಭ ನಿರ್ವಹಣೆ ಮತ್ತು ದಾಖಲಾತಿಗಳ ನಿರ್ವಹಣೆ ಕುರಿತು ಶ್ರೀ ರತ್ನಾಕರ ಹೆಗ್ಡೆ ರವರು ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸೌಹಾರ್ದ ಸಹಕಾ–ರಿಗಳಲ್ಲಿ ನಿರ್ವಹಿಸಬೇಕಾದ ಕಡತಗಳು ಮತ್ತು ಅವುಗಳ ನಿರ್ವಹಣೆ ಕುರಿತು ಮಾಹಿತಿಯನ್ನು ಶ್ರೀ ಶ್ರೀಧರ ಸೋಮಯಾಜಿ ರವರು ವಿಷಯವನ್ನು ಮಂಡಿಸಿದರು. ಸದರಿ ಕಾರ್ಯಗಾರದಲ್ಲಿ 74 ಸೌಹಾರ್ದ ಸಹಕಾರಿಗಳಿಂದ 77 ಪ್ರತಿನಿಧಿಗಳು ಭಾಗವಹಿಸಿದ್ದರು.




**ಮೈಸೂರು** : ದಿನಾಂಕ 26.05.2023 ರಂದು ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗೆ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು, ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಅಸೋಸಿಯೇಷನ (ರೋಟರಿ ಕ್ಲಬ್, ಜೆ.ಎಲ್.ಬಿ ರೋಡ್, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಯಿತು.

ತರಬೇತಿಯ ಉದ್ಘಾಟಕರಾಗಿ ಮೈಸೂರು ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಮಂಜುನಾಥ ಸಿಂಗ್ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಮೈಸೂರು, ಕೊಡಗು ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್. ಆರ್. ನಾರಾಯಣರಾವ ರವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದರ ರವರು ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಮೈಸೂರು ಮತ್ತು ಕೊಡಗು ಜಿಲ್ಲಾ ಸಂಯೋಜಕರಾದ ಶ್ರೀ ಜವಾಹರ ಮುಗ್ಗನವರ ರವರು ನೆರವೇರಿಸಿದರು. ಒಟ್ಟು 74 ಸೌಹಾರ್ದ ಸಹಕಾರಿಗಳಿಂದ 68 ಜನ ಭಾಗವಹಿಸಿದ್ದರು.



**ಮಂಡ್ಯ** : ದಿನಾಂಕ: 25.05.2023 ರಂದು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ "ವಿಷಯಾಧಾರಿತ ತರಬೇತಿ"ಯ ಉದ್ಘಾಟನೆಯನ್ನು ಶ್ರೀ ಎ.ಸಿ ರಮೇಶ್ ರವರು, ಅಧ್ಯಕ್ಷರು, ಮಂಡ್ಯ ಜಿಲ್ಲಾ ಶಾಮಿಯಾನ ಮಾಲೀಕರ ಸೌ.ಸ.ಸಂ.ನಿ., ಮಂಡ್ಯ ಇವರು ನೆರವೇರಿಸಿದರು. ಇದೇ ಸಂದರ್ಭದಲ್ಲಿ ವೇದಿಯಲ್ಲಿ ಶ್ರೀ ಶಿವಕುಮಾರ ಬಿರಾದಾರ ರವರು, ಪ್ರಾಂತೀಯ ವ್ಯವಸ್ಥಾಪಕರು, ಮೈಸೂರು, ಶ್ರೀ ಶ್ರೀಧರ ಸೋಮಯಾಜಿ ರವರು, ಸಂಪನ್ಮೂಲ ವ್ಯಕ್ತಿಗಳು, ಉಡುಪಿ ಜಿಲ್ಲೆ, ಶ್ರೀ ರಮೇಶ್ ರವರು, ಅಧ್ಯಕ್ಷರು, ಕ್ರಾಂತಿಯೋಗಿ ಶ್ರೀ ಬಸವೇಶ್ವರ ನೌಕರರ ಪತ್ತಿನ ಸೌ.ಸ.ನಿ., ಮಂಡ್ಯ, ಶ್ರೀ ಸಾರಂಗಿ ನಾಗರಾಜು ರವರು, ಅಧ್ಯಕ್ಷರು, ಕೆ.ಆರ್ ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌ.ಸ.ನಿ., ಕೆ.ಆರ್ ಪೇಟೆ, ಶ್ರೀ ಸಿದ್ದಲಿಂಗಯ್ಯ, ಅಧ್ಯಕ್ಷರು, ಸಮೃದ್ಧಿ ಭಾರತಿ ಸೌ.ಸ.ಸಂ.ನಿ., ಮದ್ದೂರು, ಶ್ರೀ ಗುರುರಾಜ್ ಬಿ.ಟಿ, ಅಧ್ಯಕ್ಷರು, ಶ್ರೀ ವೀರಮಡಿವಾಳ ಮಾಚಿದೇವ ಸೌ.ಸ.ನಿ., ಮಂಡ್ಯ ಮತ್ತು ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜ–ಕರು ಉಪಸ್ಥಿತರಿದ್ದರು.

ಸದರಿ ಸಭೆಯಲ್ಲಿ ಜಿಲ್ಲೆಯ 13 ಸೌಹಾರ್ದ ಸಹಕಾರಿಗಳ, 05 ಉದ್ದೇಶಿತ ಸಹಕಾರಿಗಳ ಪ್ರತಿನಿಧಿಗಳು ಸೇರಿ 43 ಪ್ರತಿನಿಧಿಗಳು 11 ಇತರೆ ಸೇರಿ ಒಟ್ಟು 54 ಜನರು ಹಾಜರಿದ್ದರು.

**ರಾಯಚೂರು** : ದಿನಾಂಕ 15.05.2023 ಸೋಮವಾರದಂದು ಮಾನವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನವಿ ಈ ಸಭಾಂಗಣದಲ್ಲಿ ಮಾನವಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪ–ರಿಶೋಧನಾ ಪೂರ್ವತಯಾರಿ ಹಗೂ ಇತರೇ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ಮಾನವಿ ತಾಲೂಕಿನ 18 ಸೌಹಾರ್ದ ಸಹಕಾರಿಗಳಿಂದ 20 ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೇ ಸಿಬ್ಬಂದಿಗಳು ಭಾಗವಹಿಸಿದ್ದರು.

ದಿನಾಂಕ 17.05.2023 ರಂದು ಬುಧವಾರದಂದು ಮಧ್ಯಾಹ್ನ 4 ಗಂಟೆಗೆ ಹೊರನಾಡು ಅನ್ನಪೂರ್ಣೇಶ್ವರಿ ಸೌಹಾರ್ದ ಸಹಕಾರಿ ಸಂಘ ನಿ.,ಸಹಕಾರಿಯ ಸಭಾಂಗಣದಲ್ಲಿ ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನಾ ಪೂರ್ವತಯಾರಿ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯಲ್ಲಿ ದೇವದುರ್ಗ ತಾಲೂಕಿನ 12 ಸೌಹಾರ್ದ ಸಹಕಾರಿಗಳಿಂದ 15 ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೇ ಸಿಬ್ಬಂದಿಗಳು ಭಾಗವಹಿಸಿದ್ದರು.

ದಿನಾಂಕ 19.05.2023 ರಂದು ಶುಕ್ರವಾರದಂದು ಮಧ್ಯಾಹ್ನ 3 ಗಂಟೆಗೆ ವಿಜೇತ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಸಿರವಾರ ಈ ಸಹಕಾ–ರಿಯ ಸಭಾಂಗಣದಲ್ಲಿ ಸಿರವಾರ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಲೆಕ್ಕಪರಿಶೋಧನಾ ಪೂರ್ವತಯಾರಿ ಹಾಗೂ ಇತರೇ ಶಾಸನಾತ್ಮಕ ವಿಷಯಗಳ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ಆಯೋಜಿಸಲಾಗಿ–ತ್ತು. ಈ ತರಬೇತಿಯಲ್ಲಿ ಸಿರವಾರ ತಾಲೂಕಿನ 14 ಸೌಹಾರ್ದ ಸಹಕಾ–ರಿಗಳಿಂದ 18 ಮುಖ್ಯಕಾರ್ಯನಿರ್ವಾಹಕರು ಹಾಗೂ ಇತರೇ ಸಿಬ್ಬಂದಿಗಳು ಭಾಗವಹಿಸಿದ್ದರು

## ಭೇಟಿ

**ತುಮಕೂರು :** ದಿನಾಂಕ: 22-05-2023 ರಂದು ಶಿವಶ್ರೀ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ .ಆರ್ ರವರು ಭೇಟಿ ನೀಡಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರೊಂದಿಗೆ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿದರು. ಸಹಕಾರಿಯ ಕಾನೂನು ಸಮಸ್ಯೆಗಳಿಗೆ ಸಲಹೆ ಹಾಗೂ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಚ್.ಎಸ್ ಬಾಸ್ಮಾಂಗಿ ರುದ್ರಯ್ಯ, ಉಪಾಧ್ಯಕ್ಷರು, ನಿರ್ದೇಶಕರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

**ತುಮಕೂರು :** ದಿನಾಂಕ: 22-05-2023 ರಂದು ತುಮಕೂರು ನವಚೇತನ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಧರ್ .ಆರ್ ರವರು ಭೇಟಿ ನೀಡಿ ಸಹಕಾರಿಯ ಕಾರ್ಯ ಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸೈಯದ್ ಮಹಬೂಬ್ ಪಾಷಾ ರವರು, ಉಪಾಧ್ಯಕ್ಷರು, ನಿರ್ದೇಶಕರು, ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು.

**ಹುಕ್ಕೇರಿ :** ದಿನಾಂಕ 27 ಮೇ 2023 ರಂದು ಮಹಾವೀರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಹುಕ್ಕೇರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಭೇಟಿ ನೀಡಿ ಸಹಕಾರಿಯ ಕಾರ್ಯ ಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹಾವೀರ ನಿಲಜಗಿ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ರಾಜೇಂದ್ರ ಪಾಟೀಲ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ವೃಷಭ ಪರಪ್ಪನವರ ರವರು ಉಪಸ್ಥಿತರಿದ್ದರು.

**ಹುಲ್ಲೋಳಿ :** ದಿನಾಂಕ 27 ಮೇ 2023 ರಂದು ಅರಿಹಂತ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಯಪಾಲ ಪಿ ಚೌಗಲೆ ರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಆನಂದ ಚೌಗಲೆ ಮತ್ತು ಸಿಬ್ಬಂದಿ ವರ್ಗದವರು ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ವೃಷಭ ಪರಪ್ಪನವರ ರವರು ಉಪಸ್ಥಿತರಿದ್ದರು.

**ಬೆಲ್ಲದ ಬಾಗೇವಾಡಿ :** ದಿನಾಂಕ 27 ಮೇ 2023 ರಂದು ಆದಿನಾಥ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ. ಬೆಲ್ಲದ ಬಾಗೇವಾಡಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಹಾಗೂ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಭೇಟಿ ನೀಡಿ ಸಹಕಾರಿಯ ಕಾರ್ಯ ಚಟುವಟಿಕೆಗಳ ಮತ್ತು ಗೊಬ್ಬರ ಮಾರಾಟ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಪ್ಪಾಸಾಹೇಬ ಶೇಮಲಾಪೂರೆರವರು, ಸಹಕಾರಿಯ ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಕಿರಿಯ ವ್ಯವಸ್ಥಾಪಕರಾದ ಶ್ರೀ ವೃಷಭ ಪರಪ್ಪನವರವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಮೈಸೂರು :** ಪ್ರಣವ ಸೌಹಾರ್ದ ಸಹಕಾರಿ ಸಂಘ ನಿ., ಮಂಗಳೂರು ಸಹಕಾರಿಯ 7ನೇ ಶಾಖೆಯ ಉದ್ಘಾಟನೆಯನ್ನು ಪರಮಪೂಜ್ಯ ಶ್ರೀ ಗುರು ದೇವಾನಂದ ಸ್ವಾಮೀಜಿಯವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಜಿ ಭಟ್ ಹಾಗೂ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದರ ರವರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಿ ಆರ್ ಪ್ರಸಾದ್, ಆಡಳಿತ ಮಂಡಳಿಯ ಸದಸ್ಯರು, ಸಲಹಾ ಸಮಿತಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀಮತಿ ಮಮತಾ ಶೆಟ್ಟಿಗಾರ್ ಮತ್ತು ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯಿಂದ ಖರೀದಿಗೆ ಲಭ್ಯವಿರುವ ಉಪಯೋಗಿಸಲ್ಪಟ್ಟ ಗಣಕಯಂತ್ರ ಮತ್ತು ಲ್ಯಾಪ್ ಟಾಪ್‌ಗಳು

| Sl. N | Desktop Model/ Brand | Configration | Year of pur-chase | sale value |
|---|---|---|---|---|
| | | **loptop Detils** | | |
| 1 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 2 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 3 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 4 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 5 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 6 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 7 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 8 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 9 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 10 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 11 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| 12 | Lenovo G40 | 1.9GHz Intel Core i3 4th Gen, 500GB 4 GB Ram 14 Inch Display | 2015 | 5,000.00 |
| | | **Computer Details** | | |
| 13 | Assembled | Intel(R) Core (TM) 2 Duo CPU E7500 @ 2.93GHz 2.93 GHz4.00 GB64-bit Operating systemWindows 7 Professional 250 GB | 2009 | 4,000.00 |
| 14 | Assembled | Intel(R) Core (TM) i3-2100 CPU@3.10Ghz 3.10 GHz6.00 GB64-bit Operating system, X64-based processorWindows 10 Pro500 GB | 2011 | 5,000.00 |
| 15 | Assembled | Intel(R) Core (TM) i3-2100 CPU@3.10Ghz 3.10 GHz6.00 GB64-bit Operating system, X64-based processorWindows 10 Pro500 GB | 2011 | 5,000.00 |
| 16 | Assembled | Intel(R) Core (TM) i3-2100 CPU@3.10Ghz 3.10 GHz4.00 GB64-bit Operating system, X64-based processorWindows 10 Pro500 GB | 2011 | 5,000.00 |
| 17 | Assembled | Intel(R) Core (TM) i3-4130 CPU@3.40Ghz 3.40 GHz4.00 GB32-bit Operating systemWindows 7 Professional 500 GB | 2011 | 5,000.00 |
| 18 | Assembled | Intel(R) Core (TM) i3-2100 CPU@3.10Ghz 3.10 GHz4.00 GB32-bit Operating systemWindows 7 Professional- | 2011 | 5,000.00 |

| | | | | |
|---|---|---|---|---|
| 19 | Assembled | Intel(R) Core (TM) i3-2120 CPU@3.30Ghz 3.30 GHz4.00 GB64-bit Operating system, X64-based processorWindows 10 Pro500 GB | 2011 | 5,000.00 |
| 20 | Assembled | Intel(R) Core (TM) i3-2100 CPU@3.10Ghz 3.10 GHz4.00 GB64-bit Operating system, X64-based processorWindows 10 Pro250 GB | 2011 | 5,000.00 |
| 21 | Assembled | Intel(R) Core (TM) i5-2320 CPU@3.00Ghz 3.00 GHz16.00 GB64-bit Operating system, X64-based processorWindows 10 Pro500 GB | 2011 | 5,000.00 |
| 22 | Assembled desktop | Intel(R) Core (TM) i3-4130 CPU@3.40Ghz 3.00 GHz4.00 GB64-bit Operating systemWindows 7 Professional 500 GB | 2011 | 5,000.00 |
| 23 | Assembled | Intel(R) Core (TM) i3-4130 CPU@3.40Ghz 3.00 GHz4.00 GB64-bit Operating systemWindows 7 Professional1 500 GB | 2011 | 5,000.00 |
| 24 | Assembled | Intel(R) Core (TM) i3-2100 CPU@3.10Ghz 3.10 GHz4.00 GB32-bit Operating systemWindows 7 Ultimate 500 GB | 2011 | 5,000.00 |
| 25 | Assembled | Intel(R) Core (TM) i3-2100 CPU@3.10Ghz 3.10 GHz4.00 GB32-bit Operating systemWindows 7 Ultimate 500 TB | 2011 | 5,000.00 |
| 26 | Assembled | Intel(R) Core (TM) i3- CPU 540@3.07Ghz 3.06 GHz4.00 GB32-bit Operating system, X64-based processorWindows 10 Pro500 GB | 2011 | 5,000.00 |
| 27 | Assembled | Intel(R) Core (TM) i3- CPU 540@3.07Ghz 3.06 GHz4.00 GB32-bit Operating system, X64-based processorWindows 10 Pro500 GB | 2011 | 5,000.00 |
| 28 | Assembled | Intel(R) Core (TM) 2 Duo CPU E7500 @ 2.93GHz 2.93 GHz4.00 GB32-bit Operating system, X64-based processorWin-dows 10 Pro500 GB | 2011 | 4,000.00 |
| 29 | Assembled | Intel(R) Core (TM) 2 Duo CPU E7500 @ 2.93GHz 2.93 GHz4.00 GB32-bit Operating system, X64-based processorWin-dows 10 Pro500 GB | 2011 | 4,000.00 |
| 30 | Assembled | Intel(R) Core (TM) i3-2100 CPU@3.10Ghz 3.10 GHz4.00 GB64-bit Operating system, X64-based processorWindows 10 Pro500 GB | 2011 | 5,000.00 |
| **Ipad Details** | | | | |
| 31 | Ipad | Ipad(6th Genearation) wi-fi+ Cellular 128 GB ( without Charger) Grey | 2018 | 9,900.00 |
| 32 | Ipad | Ipad(6th Genearation) wi-fi+ Cellular 128 GB ( without Charger) pink | 2018 | 9,900.00 |
| 33 | Ipad | Ipad(6th Genearation) wi-fi+ Cellular 128 GB ( without Charger) pink | 2018 | 9,900.00 |

- ಸಂಯುಕ್ತ ಸಹಕಾರಿಯಲ್ಲಿ ಈ ಮೇಲ್ಕಂಡ ಗಣಕಯಂತ್ರ ಲ್ಯಾಪ್‌ಟಾಪ್ ಮತ್ತು ಐಪ್ಯಾಡ್‌ಗಳು ಹೇಗಿದೆಯೋ ಅದೇ ಸ್ಥಿತಿಯಲ್ಲಿ ಸಹಕಾರಿಗಳಿಗೆ ಮಾರಾಟಕ್ಕೆ ಲಭ್ಯವಿದೆ.
- ಕನಿಷ್ಟ ದರವನ್ನು ನಿಗದಿಪಡಿಸಲಾಗಿದ್ದು ಕನಿಷ್ಟ ದರಕ್ಕಿಂತ ಹೆಚ್ಚಿನ ದರ ನೀಡುವ ಸಹಕಾರಿಗಳಿಗೆ ಆದ್ಯತೆ ನೀಡಲಾಗುವುದು.
- ಖರೀದಿಗೆ ಆಸಕ್ತ ಸಹಕಾರಿಗಳು ತಮ್ಮ ಸಹಕಾರಿಯ ಲೆಡರ್ ಹೆಡ್‌ನಲ್ಲಿ ಖರೀದಿಸಲು ಆಸಕ್ತರಿರುವ ಸಾಮಗ್ರಿ ಮತ್ತು ತಮ್ಮ ದರದ ವಿವರಗಳನ್ನು ದಿನಾಂಕ 20.06.2023 ರ ಒಳಗಾಗಿ ಸಂಯುಕ್ತ ಸಹಕಾರಿ ಕೇಂದ್ರ ಕಛೇರಿಗೆ ಕಳುಹಿಸುವುದು. ಸಾಮಗ್ರಿಗಳನ್ನು ಖುದ್ದು ಪರಿಶೀಲಿಸಲು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಲಭ್ಯವಿರುತ್ತದೆ.
- ಹೆಚ್ಚಿನ ವಿವರಗಳು ಮತ್ತು ಮಾಹಿತಿಗಾಗಿ ಸಂಪರ್ಕಿಸಿ: 8884466718



ಸಹಕಾರಿ ಸಂಘಗಳು &
ನಿಮ್ಮ ಕಾರ್ಪೋರೇಟ್ ಕಂಪನಿಗಳು
ತರಬೇತಿಗಾಗಿ ಸ್ಥಳ ಕಾಯ್ದಿರಿಸಿ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ತರಬೇತಿ ಸಭಾಂಗಣ

- ಹವಾ ನಿಯಂತ್ರಣ ಕೊಠಡಿ ವ್ಯವಸ್ಥೆ
- ೨೦ ರಿಂದ ೧೦೦ ಜನ ಆಸನ ಸಾಮರ್ಥ್ಯ
- ಪ್ರತ್ಯೇಕ ಊಟದ ಕೋಣೆ (೬೦ ಜನ)
- ಡಿಜಿಟಲ್ ಪರದೆಯೊಂದಿಗೆ ಹೆಚ್.ಡಿ ಧ್ವನಿವರ್ಧಕವನ್ನು ಅಳವಡಿಸಲಾಗಿದೆ.
- ಕರ್ನಾಟಕದ ಬೆಂಗಳೂರು, ಬೆಳಗಾವಿ, ಕಲಬುರಗಿ ಜಿಲ್ಲೆಯ ಸ್ಥಳಗಳಲ್ಲಿ ತರಬೇತಿ ಸಭಾಂಗಣ ಲಭ್ಯವಿರುತ್ತದೆ.



ಬೆಂಗಳೂರು – ಮಲ್ಲೇಶ್ವರಂ
ದೂ : 080–23378375–80



ಬೆಳಗಾವಿ – ಆಟೋ ನಗರ
ದೂ : 0831– 2401551




ಕಲಬುರಗಿ – ಜಿಡಿಎ ಲೇಔಟ್
ದೂ : 0847–2270222

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ :
ಬೆಂಗಳೂರು ವಿಭಾಗ : ಶ್ರೀ ಸುರೇಶ್ ಆರ್.ಎಸ್ 8884466717 & ಶ್ರೀ ವಿಕ್ರಾಂತ ಪಾಟೀಲ 7892858694
ಬೆಳಗಾವಿ ವಿಭಾಗ : ಶ್ರೀ ಬಸವರಾಜ ಹೊಂಗಲ್ 8884466719
ಕಲಬುರಗಿ ವಿಭಾಗ : ಶ್ರೀ ಸೂರ್ಯಕಾಂತ ರ್ಯಾಕಲ್ 88884466715

## ಆರ್.ಬಿ.ಐ. ರೂ.2000/- ನೋಟ್ ಚಲಾವಣೆ ಹಿಂದಕ್ಕೆ ಪಡೆದಿರುವ ಕುರಿತು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಗಮನಕ್ಕೆ

ಆರ್.ಬಿ.ಐನವರು ದಿನಾಂಕ 19.05.2023ರಂದು ಹೊರಡಿಸಿರುವ ಸುತ್ತೋಲೆಯ ಪ್ರಕಾರ ರೂ.2000/– ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆದಿರುತ್ತಾರೆ. ಈ ವಿಷಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಮಾಹಿತಿ ನೀಡುವ ದೃಷ್ಟಿಯಿಂದ ದಿನಾಂಕ 01.06.2023 ಹಾಗೂ 02.06.2023ರಂದು ಆನ್‌ಲೈನ್‌ನಲ್ಲಿ ತರಬೇತಿ ನೀಡಲಾಗಿದೆ.

ಆರ್.ಬಿ.ಐ ನ ನಿವೃತ್ತ ಎ.ಜಿ.ಎಂ ಶ್ರೀ ಕೆ.ಎಸ್ ಮಹಾದೇವ ಸ್ವಾಮಿಯವರು ಹಾಗೂ ಶ್ರೀ ಮಧುಕರ ಹೆಗಡೆ,, ಚಾರ್ಟ್‌ರ್ಡ್ ಅಕೌಂಟೆಂಟ್ ಇವರುಗಳು ಈ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ನೀಡಿದ ನೀಡಿದ ವಿವರಗಳ ಮುಖ್ಯ ಅಂಶಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಿದೆ.

1) ಒಬ್ಬ ಸದಸ್ಯರು ತಮ್ಮ ಖಾತೆಗೆ ರೂ.2000/– ಮುಖಬೆಲೆಯ 10 ನೋಟುಗಳನ್ನು ಮಾತ್ರ ಕೆವೈಸಿ ಪ್ರಕಾರ ಹಾಗೂ ಆದಾಯ ತೆರಿಗೆಯ ನಿರ್ದೇಶನಗಳನ್ನು ಗಮನದಲ್ಲಿಟ್ಟುಕೊಂಡು ತಮ್ಮ ಖಾತೆಗೆ ಜಮಾ ಮಾಡಲು ಅವಕಾಶವಿದೆ.
2) ಪಿಗ್ಮಿ ಖಾತೆಗಳಿಗೆ ಸಾಮಾನ್ಯ ಜಮಾ ಇರಬೇಕು. ಅತಿಯಾಗಿ ಜಮಾ ತೆಗೆದುಕೊಳ್ಳಬಾರದು. ಅಸಹಜವಾದ ಜಮಾ ಇರಕೂಡದು.
3) ಸಾರ್ವಜನಿಕರಿಂದ ನೋಟುಗಳನ್ನು ಅದಲು ಬದಲು (Exchange) ಮಾಡುವಂತಿಲ್ಲ.
4) ಪ್ರತಿದಿನ ಸ್ವೀಕರಿಸುವ ಠೇವಣಿಗಳಲ್ಲಿ ಅಸಹಜವಾದ ಠೇವಣಿಗಳನ್ನು ಜಮಾ ತೆಗೆದುಕೊಳ್ಳಬಾರದು.
5) ಸದಸ್ಯರು ಸಹಕಾರಿಗಳಿಗೆ ಜಮಾ ಮಾಡತಕ್ಕಂತಹ ಎಲ್ಲಾ ವಿಧವಾದ ಠೇವಣಿ/ಸಾಲಕ್ಕೆ ಎಲ್ಲದಕ್ಕೂ ಎಲ್ಲಾ ವಿಧವಾದ ವಿವರಗಳು ಕೂಡ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ಈ ಮಾಹಿತಿಯನ್ನು ಆದಾಯ ತೆರಿಗೆ ಅಧಿಕಾರಿಗಳು/ ಬ್ಯಾಂಕ್ ಅಧಿಕಾರಿಗಳು ಕೇಳಿದಾಗ ಒದಗಿಸತಕ್ಕದ್ದು.
6) ನಗದು ವ್ಯವಹಾರದ ಬಗ್ಗೆ ಆದಾಯ ತೆರಿಗೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದು.
7) ಬ್ಯಾಂಕ್‌ಗಳಲ್ಲಿ ತಮ್ಮಲ್ಲಿರುವ ರೂ.2000/– ನೋಟ್‌ಗಳನ್ನು ಬದಲಾಯಿಸಿಕೊಳ್ಳಲು ಕೊನೆಯ ದಿನಾಂಕ 30.09.2023.
8) ವ್ಯಕ್ತಿಗಳು ತಮ್ಮ ಅಕೌಂಟ್‌ನಲ್ಲಿ ಎಷ್ಟು ಮೊತ್ತ ಬೇಕಾದರೂ ಡಿಪಾಸಿಟ್ ಮಾಡಬಹುದು(ಕೆವೈಸಿ ನಾರ್ಮ್ಸ್‌ಗಳಿಗೆ ಒಳಪಟ್ಟು)
9) ಆರ್.ಬಿ.ಐನ 19 ರೀಜನಲ್ ಆಫೀಸ್‌ಗಳಲ್ಲಿ ಹಾಗೂ ಎಲ್ಲ ಕರ್ಮಷಿಯಲ್ ಮತ್ತು ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ದಿನಾಂಕ 30.09.203 ರ ವರೆಗೆ ರೂ.2000/– ನೋಟ್‌ಗಳನ್ನು ಬದಲಾಹಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

## ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

| ಕೊಪ್ಪಳ ತಾಲ್ಲೂಕ ವೀರ ರಾಣಿ ಕಿತ್ತೂರ ಚನ್ನಮ್ಮ ಪತ್ತಿನ ಸಹಕಾರಿ ಸಂಘ ನಿ., ಕೊಪ್ಪಳ. | |
|---|---|
| ಆರ್ಥಿಕ ಅಂಶಗಳು | 31.03.2023ಕ್ಕೆ ಇದ್ದಂತೆ |
| ಸದಸ್ಯರ ಸಂಖ್ಯೆ | 2392 |
| ಶೇರು ಬಂಡವಾಳ | 69,10,000 |
| ಠೇವಣಿಗಳು | 9,63,18,000 |
| ಹೂಡಿಕೆಗಳು | 2,65,30,547 |
| ಒಟ್ಟು ನಿಧಿಗಳು | 1,62,57,111 |
| ವಿತರಿಸಿದ ಸಾಲಗಳು | 8,87,17,102 |
| ದುಡಿಯುವ ಬಂಡವಾಳ | 11,93,85,111 |
| ಒಟ್ಟು ವಹಿವಾಟು | 38,81,19,047 |
| ನಿವ್ವಳ ಲಾಭ | 48,84,233 |
| ವಿತರಿಸುವ ಲಾಭಾಂಶ | 18% |

## ಅಧ್ಯಯನ ಪ್ರವಾಸ



ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿಯಮಿತದ ವತಿಯಿಂದ ಅಧ್ಯಯನ ಪ್ರವಾಸದ ಅಂಗವಾಗಿ ದಿನಾಂಕ 26 ಮತ್ತು 27 ರಂದು ಉಡುಪಿ ಮತ್ತು ಮಂಗಳೂರು ಜಿಲ್ಲೆಗಳ ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಸಿ.ಪಿ. ಪದ್ಮಪ್ರಸಾದ್ ನಿರ್ದೇಶಕರುಗಳಾದ ಎಸ್. ಬಾಲಸುಬ್ರಮಣ್ಯ, ಸಿ. ಎಸ್. ಮಹೇಶಕುಮಾರ್, ಹೆಚ್. ಬಿ. ರಾಜಶೇಖರ್, ಎ. ಶ್ರೀನಿವಾಸನ್, ಎಂ. ರಾಜಣ್ಣ ಮತ್ತು ಮುಖ್ಯ ಕಾರ್ಯನಿರ್ವಾಹಕ ಬಿ.ಜಿ. ಸಂಕೀರ್ತನ್ ಹಾಜರಿದ್ದರು.

# ಸಹಕಾರಿ ಅಸ್ಮಿತೆ (Cooperative Identity) - ಅಗತ್ಯತೆ - ಸಹಕಾರಿಗಳ ಜವಾಬ್ದಾರಿ

– ಶ್ರೀಮತಿ ದಿವ್ಯ ಟಿ, ಹಿರಿಯ ಸಹಾಯಕಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಸಹಕಾರಿ ಅಸ್ಮಿತೆಯು ಸಹಕಾರಿ ಮೌಲ್ಯಗಳನ್ನು ಸಹಕಾರಿ ವ್ಯಾಖ್ಯಾನ ಮತ್ತು ತತ್ವಗಳೊಂದಿಗೆ ಸಂಯೋಜಿಸುತ್ತದೆ. ಐಸಿಎ 1995ರಲ್ಲಿ ಸಹಕಾರಿ ಅಸ್ಮಿತೆಯ ಪರಿಷ್ಕೃತ ಹೇಳಿಕೆಯನ್ನು ಅಳವಡಿಸಿಕೊಂಡಿದೆ, ಇದು ಸಹಕಾರಿಯ ವ್ಯಾಖ್ಯಾನ, ಸಹಕಾರಿಗಳ ಮೌಲ್ಯಗಳು ಮತ್ತು ಏಳು ಸಹಕಾರಿ ತತ್ವಗಳನ್ನು ಒಳಗೊಂಡಿದೆ.

### 1. ಸಹಕಾರಿ ಅಸ್ಮಿತೆಯ ವ್ಯಾಖ್ಯಾನ (Cooperative Identity Definition) :

ಸಹಕಾರಿ ಅಸ್ಮಿತೆಯು "ಒಂದು ಜಂಟಿ ಸ್ವಾಮ್ಯದ ಮತ್ತು ಪ್ರಜಾಸತ್ತಾತ್ಮಕವಾಗಿ–ನಿಯಂತ್ರಿತ ಉದ್ಯಮದ ಮೂಲಕ ಅವರ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯತೆಗಳು ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಸ್ವಯಂಪ್ರೇರಣೆಯಿಂದ ಒಗ್ಗೂಡಿದ ವ್ಯಕ್ತಿಗಳ ಸ್ವಾಯತ್ತ ಸಂಘವಾಗಿದೆ".

### 2. ಸಹಕಾರಿ ಅಸ್ಮಿತೆಯ ಅಗತ್ಯತೆ (Need) :

- ಸಹಕಾರಿ ಅಸ್ಮಿತೆಯು ಸಾಮಾನ್ಯ ಒಳಿತಿಗಾಗಿ ಕೆಲಸ ಮಾಡಲು ಒಂದುಗೂಡಿಸುತ್ತದೆ. ಸಹಕಾರಿ ಮೌಲ್ಯಗಳು ಮತ್ತು ತತ್ವಗಳು ಲಕ್ಷಾಂತರ ಜನರಿಗೆ ತಮ್ಮ ಸ್ವಂತ ಜೀವನ, ಅವರ ಭವಿಷ್ಯದ ನಿಯಂತ್ರಣವನ್ನು ಹೊಂದಲು ಮತ್ತು ಇತರ ರೀತಿಯ ಉದ್ಯಮಗಳಿಂದ ಸಹಕಾರಿಗಳನ್ನು ಪ್ರತ್ಯೇಕಿಸುವ ಬಲವಾದ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತವೆ.

- ಇಂದಿನ ಸಂಕೀರ್ಣ ಜಾಗತಿಕ ಆರ್ಥಿಕತೆಯನ್ನು ಎದುರಿಸುವಲ್ಲಿ ನಾವೀನ್ಯತೆ ಮತ್ತು ಉದ್ಯಮಶೀಲತೆಯು ಎಂದಿಗಿಂತಲೂ ಹೆಚ್ಚು ಮುಖ್ಯವಾಗಿದೆ. ಜನ–ಕೇಂದ್ರಿತ ಸಹಕಾರಿ ಮಾದರಿಯು ಪ್ರತಿಭೆ, ಸೃಜನಶೀಲತೆಯನ್ನು ಪೋಷಿಸುತ್ತದೆ ಮತ್ತು ಹೆಚ್ಚು ಮಾನವೀಯ ಹಾಗೂ ಅಂತರ್ಗತ ಸಮಾಜವನ್ನು ರಚಿಸಲು ನವೀನ ಆಲೋಚನೆಗಳನ್ನು ಪ್ರೋತ್ಸಾಹಿಸುತ್ತದೆ.

- ಸಕಾರಾತ್ಮಕ ಪ್ರಶಾಂತತೆ ವಾತಾವರಣ ನಿರ್ಮಾಣದಲ್ಲಿ ಸಹಕಾರಿಗಳನ್ನು ಅಮೂಲ್ಯವಾದ ಸಾಧನವನ್ನಾಗಿ ಮಾಡುತ್ತದೆ. ನಿರಾಶ್ರಿತರ ಅಗತ್ಯಗಳಿಗೆ ಸ್ಪಂದಿಸಲು, ನೈಸರ್ಗಿಕ ವಿಪತ್ತುಗಳ ನಂತರ ಪುನರ್ನಿರ್ಮಾಣ ಮಾಡಲು, ಅತ್ಯಂತ ದುರ್ಬಲರನ್ನು ನೋಡಿಕೊಳ್ಳಲು ಮತ್ತು ಜಾಗತಿಕ ಸಾಂಕ್ರಾಮಿಕದ ವಿನಾಶಗಳಿಗೆ ಪ್ರತಿಕ್ರಿಯಿಸುತ್ತವೆ.

- ಯುಎನ್‌ನ 2030 ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ ಪೂರಕವಾದ ಜಗತ್ತಿನಲ್ಲಿ ಮೂಲಭೂತ ಧನಾತ್ಮಕ ಬದಲಾವಣೆಯನ್ನು ಅನುಸರಿಸಲು ಸಹಕಾರಿ ಅಸ್ಮಿತೆಯ ಅಡಿಪಾಯವು ಸಹಕಾರಿಗಳನ್ನು ಪ್ರೇರೇಪಿಸುತ್ತದೆ. ತಮ್ಮ ಸದಸ್ಯರ ನೇತೃತ್ವದ ತಳಮಟ್ಟದ ಸಂಸ್ಥೆಗಳಾಗಿ, ಸಹಕಾರಿ ಸಂಸ್ಥೆಗಳು ಅವರು ಬೇರೂರಿರುವ ಸಮುದಾಯಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಪರಿಣಾಮಕಾರಿ ವಿಧಾನಗಳನ್ನು ನೀಡಲು ಬಲವಾಗಿ ಕಾರ್ಯನಿರ್ವಹಿಸುತ್ತವೆ.

### 3. ವಿಸ್ತೃತತೆ (Coverage):

ಸಹಕಾರಿ ಅಸ್ಮಿತೆಯು ಸಹಕಾರಿ ವ್ಯಾಖ್ಯಾನ, ಸಹಕಾರಿ ಮೌಲ್ಯಗಳು ಹಾಗೂ ಸಹಕಾರಿ ತತ್ವಗಳನ್ನು ಒಳಗೊಂಡಿದ್ದು, ಸಹಕಾರಿ ವ್ಯಾಖ್ಯಾನ, ಸಹಕಾರಿ ಮೌಲ್ಯಗಳು ಹಾಗೂ ಸಹಕಾರಿ ತತ್ವಗಳು ಪರಸ್ಪರ ಸಂಬಂಧವನ್ನು ಹೊಂದಿದೆ.

**• ಸಹಕಾರಿ ವ್ಯಾಖ್ಯಾನ :**

ಸಹಕಾರಿಗಳು ತಮ್ಮ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಮತ್ತು ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಸ್ವ ಒಡೆತನದ, ನಿಯಂತ್ರಿಸುವ ಮತ್ತು ನಡೆಸುತ್ತಿರುವ ಜನ–ಕೇಂದ್ರಿತ ಉದ್ಯಮಗಳಾಗಿವೆ.

ಸಹಕಾರಿ ಸಂಸ್ಥೆಗಳು ಜನರನ್ನು ಪ್ರಜಾಸತ್ತಾತ್ಮಕವಾಗಿ ಮತ್ತು ಸಮಾನ ರೀತಿಯಲ್ಲಿ ಒಟ್ಟುಗೂಡಿಸುತ್ತದೆ. ಸದಸ್ಯರು, ಗ್ರಾಹಕರು, ಉದ್ಯೋಗಿಗಳು, ಬಳಕೆದಾರರು ಅಥವಾ ನಿವಾಸಿಗಳಾಗಿರಲಿ, ಸಹಕಾರಿ ಸಂಸ್ಥೆಗಳು 'ಒಬ್ಬ ಸದಸ್ಯ, ಒಂದು ಮತ' ನಿಯಮದಿಂದ ಪ್ರಜಾಸತ್ತಾತ್ಮಕವಾಗಿ ನಿರ್ವಹಿಸಲ್ಪಡುತ್ತವೆ. ಸದಸ್ಯರು ಸಂಸ್ಥೆಗೆ ಹಾಕುವ ಬಂಡವಾಳದ ಮೊತ್ತವನ್ನು ಲೆಕ್ಕಿಸದೇ ಸಮಾನ ಮತದಾನದ ಹಕ್ಕುಗಳನ್ನು ಹೊಂದಿರುತ್ತಾರೆ.

ಮೌಲ್ಯಗಳಿಂದ ನಡೆಸಲ್ಪಡುವ ವ್ಯವಹಾರಗಳಂತೆ, ಕೇವಲ ಲಾಭ ಗಳಿಕೆಯೊಂದೇ ಮುಖ್ಯ ಉದ್ದೇಶವಲ್ಲ, ಸಹಕಾರಿ ಸಂಸ್ಥೆಗಳು ಅಂತರಾಷ್ಟ್ರೀಯವಾಗಿ ಅಂಗೀಕರಿಸಲ್ಪಟ್ಟ ತತ್ವಗಳನ್ನು ಒಳಗೊಂಡಿದೆ ಮತ್ತು ಸಹಕಾರದ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಒಟ್ಟಾಗಿ ಕಾರ್ಯನಿರ್ವಹಿಸುತ್ತವೆ. ನ್ಯಾಯೋಚಿತತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯವನ್ನು ಹೊಂದಿ, ಪ್ರಪಂಚದಾದ್ಯಂತ ಸಹಕಾರಿ ಸಂಸ್ಥೆಗಳು ದೀರ್ಘಕಾಲೀನ ಉದ್ಯೋಗಗಳು ಮತ್ತು ಸಮೃದ್ಧಿಯನ್ನು ಹೊಂದಲು, ಸುಸ್ಥಿರ ಉದ್ಯಮಗಳನ್ನು ರಚಿಸಲು ಜನರು ಒಟ್ಟಾಗಿ ಕೆಲಸ ಮಾಡಲು ಅವಕಾಶ ಮಾಡಿಕೊಡುತ್ತವೆ. ಸಹಕಾರಿ ಸಂಸ್ಥೆಗಳು ಜನರು ತಮ್ಮ ಆರ್ಥಿಕ ಭವಿಷ್ಯದ ಮೇಲೆ ಹಿಡಿತ ಸಾಧಿಸಲು ಅವಕಾಶ ಮಾಡಿಕೊಡುತ್ತವೆ.

**• ಸಹಕಾರಿ ಮೌಲ್ಯಗಳು :**

ಸಹಕಾರಿ ಸಂಸ್ಥೆಗಳು ಸ್ವ–ಸಹಾಯ, ಸ್ವ–ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ನ್ಯಾಯ ಮತ್ತು ಒಗ್ಗಟ್ಟಿನ ಮೌಲ್ಯಗಳನ್ನು ಆಧರಿಸಿವೆ. ಸಹಕಾರಿ ಸದಸ್ಯರು ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ ಮತ್ತು ಇತರರ ಬಗ್ಗೆ ಕಾಳಜಿ ವಹಿಸುವ ನೈತಿಕ ಮೌಲ್ಯಗಳನ್ನೊಳಗೊಂಡಿದೆ.

**• ಸಹಕಾರ ತತ್ವಗಳು :**

ಸಹಕಾರಿ ಸಂಸ್ಥೆಗಳಿಗೆ ತಮ್ಮ ಮೌಲ್ಯಗಳನ್ನು ಆಚರಣೆಗೆ ತರಲು ಸಹಕಾರಿ ತತ್ವಗಳು ಮಾರ್ಗಸೂಚಿಗಳಾಗಿವೆ. 7 ಸಹಕಾರಿ ತತ್ವಗಳನ್ನು ಒಳಗೊಂಡಿದೆ. ಅವುಗಳೆಂದರೆ,

**ಮೊದಲ ತತ್ವ : ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ :**

ಸಹಕಾರಿ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳಾಗಿವೆ, ಲಿಂಗ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೇ ತಮ್ಮ ಸೇವೆಗಳನ್ನು ಬಳಸಲು ಮತ್ತು ಸದಸ್ಯತ್ವದ ಜವಾಬ್ದಾರಿಗಳನ್ನು ಸ್ವೀಕರಿಸಲು ಸಿದ್ಧರಿರುವ ಎಲ್ಲಾ ವ್ಯಕ್ತಿಗಳಿಗೂ

ಮುಕ್ತವಾಗಿದೆ.

**ಎರಡನೇ ತತ್ವ : ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ :**

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಂದ ನಿಯಂತ್ರಿಸಲ್ಪಡುವ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿವೆ, ಅವರು ತಮ್ಮ ನೀತಿಗಳನ್ನು ಹೊಂದಿಸುವಲ್ಲಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಚುನಾಯಿತ ಪ್ರತಿನಿಧಿಗಳಾಗಿ ಸೇವೆ ಸಲ್ಲಿಸುತ್ತಿರುವ ಪುರುಷರು ಮತ್ತು ಮಹಿಳೆಯರು ಸದಸ್ಯತ್ವಕ್ಕೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಸದಸ್ಯರಿಗೆ ಸಮಾನ ಮತದಾನದ ಹಕ್ಕುಗಳಿವೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿ ಸಹಕಾರಿ ಸಂಸ್ಥೆಗಳು ಸಹ ಪ್ರಜಾಸತ್ತಾತ್ಮಕ ರೀತಿಯಲ್ಲಿ ಸಂಘಟಿತವಾಗಿವೆ.

**ಮೂರನೇ ತತ್ವ : ಸದಸ್ಯರ ಆರ್ಥಿಕ ಭಾಗವಹಿಸುವಿಕೆ :**

ಸದಸ್ಯರು ತಮ್ಮ ಬಂಡವಾಳಕ್ಕೆ ಸಮಾನವಾಗಿ ಕೊಡುಗೆ ನೀಡುತ್ತಾರೆ ಮತ್ತು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕನಿಷ್ಠ ಭಾಗವು ಸಾಮಾನ್ಯವಾಗಿ ಸಹಕಾರಿಯ ಸಾಮಾನ್ಯ ಆಸ್ತಿಯಾಗಿದೆ. ಸದಸ್ಯತ್ವದ ಷರತ್ತಿನಂತೆ ಹೊಂದಿರುವ ಬಂಡವಾಳದ ಮೇಲೆ ಸದಸ್ಯರು ಸಾಮಾನ್ಯವಾಗಿ ಸೀಮಿತ ಪರಿಹಾರವನ್ನು ಪಡೆಯುತ್ತಾರೆ.

**ನಾಲ್ಕನೇ ತತ್ವ : ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ :**

ಸಹಕಾರಿ ಸಂಸ್ಥೆಗಳು ಸ್ವಾಯತ್ತ, ಸ್ವ-ಸಹಾಯ ಸಂಸ್ಥೆಗಳು ತಮ್ಮ ಸದಸ್ಯರಿಂದ ನಿಯಂತ್ರಿಸಲ್ಪಡುತ್ತವೆ. ಅವರು ಸರ್ಕಾರಗಳು ಸೇರಿದಂತೆ ಇತರ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡರೆ ಅಥವಾ ಬಾಹ್ಯ ಮೂಲಗಳಿಂದ ಬಂಡವಾಳವನ್ನು ಸಂಗ್ರಹಿಸಿದರೆ, ಅವರು ತಮ್ಮ ಸದಸ್ಯರಿಂದ ಪ್ರಜಾಪ್ರಭುತ್ವ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳುವ ಮತ್ತು ತಮ್ಮ ಸಹಕಾರಿ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ನಿಯಮಗಳ ಮೇಲೆ ಕಾರ್ಯನಿರ್ವಹಿಸುತ್ತಾರೆ.

**ಐದನೇ ತತ್ವ : ಶಿಕ್ಷಣ, ತರಬೇತಿ ಮತ್ತು ಪ್ರಚಾರ :**

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು, ಚುನಾಯಿತ ಪ್ರತಿನಿಧಿಗಳು, ವ್ಯವಸ್ಥಾಪಕರು ಮತ್ತು ಉದ್ಯೋಗಿಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ ಮತ್ತು ಪ್ರಚಾರವನ್ನು ಮಾಡುತ್ತವೆ. ಆದ್ದರಿಂದ, ಅವರು ತಮ್ಮ ಸಹಕಾರಿಗಳ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡಬಹುದು. ಅವರು ಸಾಮಾನ್ಯ ಜನರಿಗೆ – ವಿಶೇಷವಾಗಿ ಯುವಜನರಿಗೆ ಮತ್ತು ನಾಯಕರಿಗೆ – ಸಹಕಾರದ ಸ್ವರೂಪ ಬಗ್ಗೆ ಮತ್ತು ಪ್ರಯೋಜನಗಳ ಬಗ್ಗೆ ತಿಳಿಸುತ್ತಾರೆ.

**ಆರನೇ ತತ್ವ : ಸಹಕಾರಿಗಳ ನಡುವೆ ಸಹಕಾರ :**

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಅತ್ಯಂತ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುತ್ತದೆ. ಸ್ಥಳೀಯ, ಪ್ರಾದೇಶಿಕ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ರಚನೆಗಳ ಮೂಲಕ ಒಟ್ಟಾಗಿ ಕೆಲಸ ಮಾಡುವ ಮೂಲಕ ಸಹಕಾರ ಚಳುವಳಿಯನ್ನು ಬಲಪಡಿಸುತ್ತದೆ.

**ಏಳನೇ ತತ್ವ : ಸಾಮಾಜಿಕ ಕಳಕಳಿ/ ಸಮುದಾಯದ ಕಾಳಜಿ :**

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು ಅನುಮೋದಿಸಿದ ನೀತಿಗಳ ಮೂಲಕ ತಮ್ಮ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತದೆ.

**4. ಅಸ್ಮಿತೆ ವೃದ್ಧಿಸುವಲ್ಲಿ ಕ್ರಿಯಾಯೋಜನೆ :**

ಆರ್ಥಿಕ ಕಾರ್ಯಸಾಧ್ಯತೆ ಮತ್ತು ಸಾಮಾಜಿಕ ಜವಾಬ್ದಾರಿ ಎರಡನ್ನೂ ಸಹಕಾರಿ ಸಂಸ್ಥೆಗಳು ಅನುಸರಿಸಲು ಸಾಧ್ಯ ಎಂದು ಅಂತರ ರಾಷ್ಟ್ರೀಯ ಸಮುದಾಯಕ್ಕೆ ನೆನಪಿಸುತ್ತದೆ. ಸಹಕಾರಿ ಸಂಸ್ಥೆಗಳನ್ನು ಸಜ್ಜುಗೊಳಿಸುವ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಹಕಾರಿ ಅಸ್ಮಿತೆಯನ್ನು ವೃದ್ಧಿಸಬೇಕು. ಅಸ್ಮಿತೆಯನ್ನು ವೃದ್ಧಿಸುವಲ್ಲಿ ಕ್ರಿಯಾಯೋಜನೆಗಳು ಈ ಕೆಳಗಿನಂತಿದೆ;

– ಸಹಕಾರಿ ವ್ಯವಹಾರ ಮಾದರಿಯು ಮಾನವೀಯತೆ ಮತ್ತು ಪರಿಸರ ಸ್ನೇಹಿ ವೈಶಿಷ್ಟ್ಯಗಳನ್ನು ಹೊಂದಿದೆ. ಆದರೆ, ವಿಶ್ವದ ಸಂಪನ್ಮೂಲಗಳಲ್ಲಿ ಕಂಪನಿಗಳು ಮತ್ತು ಎನ್‌ಜಿಒಗಳು ಹೆಚ್ಚಿನ ಪ್ರಾಬಲ್ಯವನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ಸಹಕಾರಿಗಳು ಜಗತ್ತಿಗೆ ಕಡಿಮೆ ಆಕರ್ಷಕವಾಗಿರುವ ಅಂಶಗಳನ್ನು ಗುರುತಿಸಬೇಕು ಮತ್ತು ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕು.

– ಆರ್ಥಿಕ ಬಿಕ್ಕಟ್ಟು ಸಹಕಾರಿ ಚಳುವಳಿಗೆ ವ್ಯವಹಾರದ ಅವಕಾಶಗಳಾಗಿದ್ದು, ಇದನ್ನು ಸಮರ್ಪಕವಾಗಿ ಸದುಪಯೋಗಪಡಿಸಿಕೊಳ್ಳಬೇಕು.

– ಸಹಕಾರಿ ಸಂಸ್ಥೆಗಳು ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಅನುಷ್ಠಾನದಲ್ಲಿ ದೃಢವಾಗಿರಬೇಕು. ಸಹಕಾರಿ ಸಂಸ್ಥೆಗಳು ಸದಸ್ಯರ ಆಕಾಂಕ್ಷೆಗಳಿಗಾಗಿ ಅತ್ಯುತ್ತಮ ಉದ್ಯಮದ ಆಯ್ಕೆಯನ್ನು ನೀಡಬೇಕು. ಬ್ರ್ಯಾಂಡ್‌ಗೆ ಹೊಂದಿಕೊಳ್ಳುವ ಸಂಸ್ಥೆಗಳು ಮಾತ್ರ ಸಹಕಾರಿ ಸಂಸ್ಥೆಗಳಾಗಿರುತ್ತವೆ.

– ಪ್ರತಿ ದೇಶದ ಸಹಕಾರಿ ಸಂಸ್ಥೆಗಳ ಗುಣಮಟ್ಟದ ಶ್ರೇಣೀಕರಣ ಮಾಡುವುದು ಸೂಕ್ತವಾಗಿರುತ್ತದೆ.

– ಸಹಕಾರಿ ಸಂಸ್ಥೆಯ ಯಶಸ್ಸನ್ನು ರಕ್ಷಿಸಲು ಹಾಗೂ ಸಹಕಾರಿ ವೈಫಲ್ಯವನ್ನು ತಪ್ಪಿಸಲು ತಾಂತ್ರಿಕ ಕೌಶಲ್ಯಗಳನ್ನು ಬಳಸಬೇಕು.

– ವಾರ್ಷಿಕ ಸಹಕಾರಿ ರೇಟಿಂಗ್ (ರಾಷ್ಟ್ರೀಯವಾಗಿ ಮತ್ತು ಅಂತಾರಾಷ್ಟ್ರೀಯವಾಗಿ ಪ್ರತಿ ವಲಯಕ್ಕೆ) ಬ್ರ್ಯಾಂಡ್ ಮತ್ತು ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ.

– ಹಲವು ಹೊಸ ಸಹಕಾರಿ ಸಂಸ್ಥೆಗಳು ಸಹಕಾರಿ ಐಕಮತ್ಯಕ್ಕೆ ಹೊಸಬರಾಗಿರುತ್ತಾರೆ. ಸದಸ್ಯರು ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳನ್ನು ಗೌರವಿಸಬೇಕು. ಜ್ಞಾನವನ್ನು ವ್ಯವಹಾರದ ಸಂಪನ್ಮೂಲವಾಗಿ ಪರಿಗಣಿಸಬೇಕು.

**5. ಸಹಕಾರಿಗಳ ಜವಾಬ್ದಾರಿಗಳು (Need for Expansion) :**

– ಸ್ವ-ಸಹಾಯ ಮತ್ತು ಪರಸ್ಪರ ಸಹಾಯದ ಮೌಲ್ಯವು ಜಂಟಿ ಸ್ವಾಮ್ಯದ ಮತ್ತು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿತ ಉದ್ಯಮ ಭಾಗವಾಗಿ ಮತ್ತು ಸದಸ್ಯರ ಆರ್ಥಿಕ ಭಾಗವಹಿಸುವಿಕೆ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಮತ್ತು ಸಮುದಾಯದ ಕಾಳಜಿಯ ತತ್ವಗಳಲ್ಲಿ ಕಂಡುಕೊಳ್ಳುವ ಮೂಲಕ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು.

– ಸಹಕಾರಿ ಸಂಸ್ಥೆಗಳು ಆರ್ಥಿಕತೆಯ ಹೆಚ್ಚಿನ ಕ್ಷೇತ್ರಗಳಲ್ಲಿ ಆರ್ಥಿಕವಾಗಿ ಸಮರ್ಥವಾಗಿವೆ ಮತ್ತು ಮೂಲಭೂತ ಹಾಗೂ ವಿಕಸನಗೊಳ್ಳುತ್ತಿರುವ ಮಾನವ ಅಗತ್ಯಗಳಲ್ಲಿ ಮುಂಚೂಣಿಯಲ್ಲಿದ್ದು, ಈ ನಿಟ್ಟಿನಲ್ಲಿ ಸಹಕಾರಿ

30ನೇ ಪುಟಕ್ಕೆ.....

# ಸಾಲ ಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ -ನಿರ್ದೇಶಕರ ಕರ್ತವ್ಯ ಹಾಗೂ ಜವಾಬ್ದಾರಿಗಳು

– ಶ್ರೀ ಎಸ್, ಜಿ ಜೋಷಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು(ನಿ)., ವಕೀಲರು ಹುಬ್ಬಳ್ಳಿ.
ಕನ್ನಡ ಅನುವಾದ : ಶ್ರೀಮತಿ ಸವಿತ ಎನ್. ಇ. ಕ.ರಾ.ಸೌ.ಸಂ.ಸ.ನಿ., ಬೆಂಗಳೂರು

ಸೌಹಾರ್ದ ಸಹಕಾರಿಗಳ ಅಥವಾ ಸಹಕಾರಿ ಸಂಘಗಳ ನಿರ್ದೇಶಕರು ಸದರಿ ಸಂಸ್ಥೆಯ ಟ್ರಸ್ಟಿಗಳಂತೆ ಕಾರ್ಯನಿರ್ವಹಿಸಬೇಕಾಗುತ್ತದೆ. ಸಹಕಾರಿಯ ಹಾಗೂ ಸದಸ್ಯರ ಹಿತ ಗಮನದಲ್ಲಿಟ್ಟು ಕಾರ್ಯನಿರ್ವಹಿಸುತ್ತಿರುವ ವಿಶೇಷವಾಗಿ ಸದಸ್ಯರಿಗೆ ಸಾಲ ನೀಡುವಾಗ ಪಡೆಯುವ ದಾಖಲಾತಿಗಳ ಹಾಗೂ ಅದೇ ಸಂದರ್ಭದಲ್ಲಿ ನಿರ್ವಹಿಸಬೇಕಾದ ಅಗತ್ಯ ದಾಖಲೆಗಳ ಬಗ್ಗೆ ನಿರ್ದೇಶಕರು ತಿಳಿದುಕೊಂಡಿರುವುದು ಅವಶ್ಯಕ ಅದೇ ರೀತಿ ಸಾಲ ವಸೂಲಾತಿ ಕ್ರಮಗಳ ಬಗ್ಗೆಯೂ ತಿಳಿದಿರ ಬೇಕಾಗುತ್ತದೆ.

ಈ ಬಗ್ಗೆ ಸಹಕಾರಿ ಇಲಾಖೆಯ ನಿವೃತ್ತ ಅಧಿಕಾರಿ ಹಾಗೂ ವಕೀಲರು ನಿರಂತರವಾಗಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳಲ್ಲಿ ಉಪನ್ಯಾಸ ನೀಡುವ ಮೂಲಕ ಮಾಹಿತಿ ನೀಡುತ್ತಿರುತ್ತಾರೆ. ದಿನಾಂಕ 18.05.2023 ರಂದು ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಏರ್ಪಡಿಸಿದ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಏರ್ಪಡಿಸಿದ್ದ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಅವರು ನೀಡಿದ ಉಪನ್ಯಾಸದ ಆಯ್ದ ವಿವರಗಳನ್ನು ನಿರ್ದೇಶಕರುಗಳ ಮಾಹಿತಿಗಾಗಿ ಪ್ರಕಟಿಸಿದೆ.

1. ಇತ್ತೀಚಿನ ಕಾಯಿದೆ ಪುಸ್ತಕ–KSS ಕಾಯಿದೆ, 1997 ಮತ್ತು ನಿಯಮಗಳು 2004, ಠೇವಣಿ ನಿಯಮಗಳು, ಸಾಲ ನಿಯಮಗಳು, ಸಿಬ್ಬಂದಿ ಸೇವಾ ನಿಯಮಗಳ ಒಳಗೊಂಡಿದೆ. ಅಧ್ಯಯನ ಮಾಡುವುದು.
2. ಸಾಲದ ದಾಖಲಾತಿ/ಸಾಲಗಳ ವಸೂಲಾತಿಗೆ ಸಂಬಂಧಿಸಿದಂತೆ ನಿರ್ದೇಶಕರು/ಸಿಬ್ಬಂದಿ ಸದಸ್ಯರಿಗೆ ನಿಯತಕಾಲಿಕ ತರಬೇತಿ/ಪ್ರಾಯೋಗಿಕ ಭೇಟಿಗಳನ್ನು ಹಾಗೂ ಯಶಸ್ವಿ ಸಂಸ್ಥೆಗಳಿಗೆ ಬೇಟಿಯನ್ನು ಏರ್ಪಡಿಸುವುದು
3. ಸಿಬ್ಬಂದಿಗಳಿಗೆ ಕೆಲಸದ ಸರದಿ/ಶಾಖೆಗಳ ನಡುವೆ ವರ್ಗಾವಣೆಗಳು
4. ಸಿಬ್ಬಂದಿಗಳಿಗೆ ಜಾಬ್ ಚಾರ್ಟ್‌ಗಳು/ಕರ್ತವ್ಯಗಳ ಒಪ್ಪಿಗೆ – ನಿಯತಕಾಲಿಕವಾಗಿ ಅವುಗಳನ್ನು ಪರಿಷ್ಕರಿಸಿ
5. ಸಿಬ್ಬಂದಿಗಳಿಗೆ ನಗದು ಭದ್ರತಾ ಠೇವಣಿ
6. ಸಿಬ್ಬಂದಿಗಳಿಗೆ ಜಾಮೀನು ಬಾಂಡ್‌ಗಳು – ಏಪ್ರಿಲ್‌ನಲ್ಲಿ ವರ್ಷಕ್ಕೊಮ್ಮೆಯಾದರೂ ಪರಿಶೀಲಿಸಿ
7. ನಿಯತಕಾಲಿಕವಾಗಿ ಶಾಖೆಗಳಿಗೆ ಆಕಸ್ಮಿಕ ಭೇಟಿಗಳು, ನಗದು ಬಾಕಿ, ಸ್ಟಾಕ್‌ಗಳನ್ನು ಪರಿಶೀಲಿಸಿ & ಪರಿಷ್ಕರಿಸಿ.
8. ಚಿನ್ನದ ಸಾಲಗಳಿಗೆ ಸಂಬಂಧಿಸಿದಂತೆ – ಸಾಲ ಮಂಜೂರಾತಿ ಸಮಯದಲ್ಲಿ ಮೌಲ್ಯಮಾಪನ ವರದಿಯನ್ನು ನೀಡಿದ ವ್ಯಕ್ತಿಯನ್ನು ಹೊರತುಪಡಿಸಿ ಚಿನ್ನದ ಮೌಲ್ಯಮಾಪಕರಿಂದ ಚಿನ್ನದ ಲೇಖನಗಳ ದೃಢೀಕರಣ ಮಾಡುವುದು.

**–: ಸಾಲದ ದಾಖಲೆಗಳು :–**

9. ದಾಖಲೆಗಳಲ್ಲಿ "ವೈಟ್ನರ್/ದ್ರವ" ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ
10. ಪ್ರತಿ ವಿಧದ ಸಾಲಕ್ಕಾಗಿ ಸಿದ್ಧಪಡಿಸಬೇಕಾದ ಮತ್ತು ಇರಿಸಬೇಕಾದ ಚೆಕ್ ಪಟ್ಟಿ, ಇದರಿಂದ ಉದ್ದೇಶಿತ ಸಾಲಗಾರನಿಗೆ ತ್ವರಿತ ಸಾಲಗಳ ಮಂಜೂರಾತಿಗಾಗಿ ಒಂದು ಸಮಯದಲ್ಲಿ ದಾಖಲೆಗಳನ್ನು ಸಲ್ಲಿಸಲು ಕೇಳಲಾಗುತ್ತದೆ.
11. ಸಾಲ ಪಡೆದವರ ಕುಟುಂಬದ ಸದಸ್ಯರ ಪಟ್ಟಿ ಮತ್ತು ಷ್ಯೂರಿಟಿಗಳು ಪಡೆಯುವುದು.
12. ಸಾಲಗಳ ಮಂಜೂರಾತಿಗೆ ಇತರ ಆದಾಯದ ಮೂಲ ಹಾಗೂ ಮುಂಚಿತವಾಗಿ ಯಾವುದೇ ಕಾರಣ ಪ್ರಮಾಣ ಪತ್ರಗಳಿಲ್ಲ ಅದನ್ನು ಪಡೆಯ ಕೂಡದು.
13. ಸ್ಥಿರ ಆಸ್ತಿಯ ಹಿಡುವಳಿಯನ್ನು ಲೆಕ್ಕಿಸದೆ ಸಾಲದ ಉದ್ದೇಶ, ಸಾಲಗಾರನ ಮರುಪಾವತಿ ಸಾಮರ್ಥ್ಯವನ್ನು ಎಚ್ಚರಿಕೆಯಿಂದ ಪರೀಕ್ಷಿಸಿ
14. ಸಾಲ ಮಂಜೂರಾತಿಗಾಗಿ ಸಿಬ್ಬಂದಿ ಮೇಲೆ ಪ್ರಭಾವ ಬೀರಬೇಡಿ, ನೋಂದಾಯಿತ ಕಚೇರಿಯಲ್ಲಿ ಸಿಇಒ/ಅಧಿಕೃತ ಅಧಿಕಾರಿಯ ಸಮ್ಮುಖದಲ್ಲಿ ಮಾತ್ರ ಸಹಿ ಮಾಡಬೇಕಾದ ದಾಖಲೆಗಳು.
15. ನೀಡಬೇಕಾದ ಎಕ್ಸ್‌ಪ್ರೆಸ್ ಷರತ್ತುಗಳೊಂದಿಗೆ ಮಂಜೂರಾತಿ ಪತ್ರಗಳು
16. ಸಾಲವನ್ನು ವಿತರಿಸುವ ಮೊದಲು ಸಾಲಗಾರನ ಕುಟುಂಬದ ಸದಸ್ಯರ ಸಂದರ್ಶನಕ್ಕೆ ವ್ಯವಸ್ಥೆ ಮಾಡಿ
17. ಡೀಡ್‌ಗಳು, ಜಿಪಿಎಗಳು, ಎನ್‌ಎಸ್‌ಸಿ/ಕೆವಿಪಿ ಪ್ರಮಾಣಪತ್ರಗಳು, ಅಸೈನ್‌ಮೆಂಟ್‌ಗಳೊಂದಿಗೆ ಎಲ್‌ಐಸಿ ಪಾಲಿಸಿಗಳಂತಹ ಶೀರ್ಷಿಕೆಗಳ ದಾಖಲೆಗಳು, ಸಂಬಳ ಆಧಾರಿತ ಸಾಲಗಳಲ್ಲಿ ಪೇ ಡ್ರಾಯಿಂಗ್ ಅಧಿಕಾರಿಯ ಅಂಡರ್ ಟೇಕಿಂಗ್‌ಗಳು, ಮೂಲದಲ್ಲಿ ಪಡೆಯಬೇಕು.
18. ಸಾಲದ ಡೀಫಾಲ್ಟ್ ಸಂದರ್ಭದಲ್ಲಿ ಸಂಪೂರ್ಣ ಸಾಲವನ್ನು ಮರುಪಡೆಯಲು ಒಪ್ಪಂದ/ಬಾಂಡ್‌ಗಳಲ್ಲಿ ಷರತ್ತನ್ನು ಒದಗಿಸಿ
19. ಸಾಲಗಳ ನವೀಕರಣ/ಪುನರುಜ್ಜೀವನ–ಸ್ಥಿರ ಆಸ್ತಿಗಳ ನಿರಂತರ ಭದ್ರತೆಗಾಗಿ ತಾಜಾ ದಾಖಲೆಗಳನ್ನು ಪಡೆಯಬೇಕು
20. ಸುರಕ್ಷಿತ ಸಾಲಗಳಿಗೆ ಸಂಬಂಧಿಸಿದಂತೆ ವಕೀಲರಿಂದ ಕಾನೂನು ಅಭಿಪ್ರಾಯಗಳು
21. ಕಾಯಿದೆಯ ಸೆಕ್ಷನ್ 19ഠ ಅಡಿಯಲ್ಲಿ ಸಂಬಳ ಸಾಲಗಳು–

ಕೈಗೊಳ್ಳುವಿಕೆ

22. ಮಂಜೂರಾತಿ ಷರತ್ತುಗಳ ಅನುಸರಣೆಯ ನಂತರ ಮಾತ್ರ ಸಾಲಗಳ ಬಿಡುಗಡೆ

23. ಇತರ ಶಾಖೆಯ ಆಂತರಿಕ ಲೆಕ್ಕ ಪರಿಶೋಧಕರು/ಹಿರಿಯ ಸಿಬ್ಬಂದಿಯಿಂದ ದಾಖಲೆಗಳ ಆಂತರಿಕ ಲೆಕ್ಕಪರಿಶೋಧನೆ (ನಿರ್ದೇಶಕರಲ್ಲಿ ಒಬ್ಬರಿಂದ)ಆಗಬೇಕು.

**ಸಾಲಗಳ ವಸೂಲಾತಿ**

24. ನೀವು ಸಾಲವನ್ನು ಪಡೆದಿದ್ದರೆ, ನಿಗದಿತ ದಿನಾಂಕಗಳ ಮೊದಲು ಪಾವತಿಸಿ, ಇದರಿಂದ ನೀವು ಇತರರಿಗೆ ಮಾದರಿಯಾಗುತ್ತೀರಿ (ಸಹಕಾರಿಯ ನಿರ್ದೇಶಕರು// ಸೌಹಾರ್ದ ಬ್ಯಾಂಕ್‌ಗಳು ಸಾಲವನ್ನು ಪಡೆಯಲು ಅರ್ಹರಲ್ಲ)

25. ನಿಮ್ಮ ಸಂಸ್ಥೆಗೆ ಅನ್ವಯವಾಗುವಂತೆ ಕಾಯಿದೆಯ ನಿಬಂಧನೆಗಳು, ಇಲಾಖೆಯ ನಿರ್ದೇಶನಗಳು, ಭಾರತೀಯ ರಿಸರ್ವ್ ಬ್ಯಾಂಕ್.

26. ಮಾನಿಟರ್, 1 ನೇ ಸೂಚನೆ, 2 ನೇ ಸೂಚನೆ, 3 ನೇ ಸೂಚನೆಯನ್ನು ಸಿಇಒ/ಬ್ರಾಂಚ್ ಮ್ಯಾನೇಜರ್ ಕಳುಹಿಸಿದ್ದಾರೆ

27. ಪ್ರತಿ ವಾರ NPA ಯ ಪರಿಶೀಲನೆ, ವರ್ಷದುದ್ದಕ್ಕೂ, ವಸೂಲಾತಿ ಪ್ರಕ್ರಿಯೆಯಲ್ಲಿ ಪ್ರತಿ ಸಿಬ್ಬಂದಿಗೆ ಗುರಿ, ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ ಪರಿಶೀಳಿಸಿ.

28. ವಿಭಾಗ 39, 37A ಸೌಹಾರ್ದ ಸಹಕಾರಿ ಕಾಯಿದೆ, 1997ರ ಅಡಿಯಲ್ಲಿ ಕ್ರಮ, ಸೆಕ್ಷನ್ – 138 ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ ತಿಳಿದಿರಿ

29. ತೀರ್ಪಿನ ಸಾಲಗಾರರು ಜಂಟಿಯಾಗಿ ಮತ್ತು ಹಲವಾರು ಹೊಣೆಗಾರರಾಗಿರುವುದರಿಂದ, ಅವರೆಲ್ಲರ ಮೇಲೆ ಏಕಕಾಲದಲ್ಲಿ ಕ್ರಮ ಕೈಗೊಳ್ಳಬಹುದು

30. ಷ್ಯೂರಿಟ್‌ಗಳೊಂದಿಗೆ ಡಿಫಾಲ್ಟರ್‌ಗಳ ಸಂಪರ್ಕ ಅಗತ್ಯ.

31. ಸಿಬ್ಬಂದಿಯನ್ನು ಮೇಲ್ವಿಚಾರಣೆ ಮಾಡಿ – ಅವರು ವರ್ಷವಿಡೀ ಪ್ರತಿದಿನ ಬೆಳಿಗ್ಗೆ 7 ಗಂಟೆಗೆ ಚೇತರಿಕೆಗೆ ಹಾಜರಾಗುತ್ತಾರೆ (ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯನ್ನು ತಪ್ಪಿಸಲು ರಜಾದಿನಗಳು / ಭಾನುವಾರದಂದು ಕಾರ್ಯಗತಗೊಳಿಸುವುದನ್ನು ತಪ್ಪಿಸಿ)

32. ಹಕ್ಕುಗಳ ದಾಖಲೆ/ಸಿಟಿಎಸ್ ಸಾರಗಳು/ಪಿಡಿಒ ಪ್ರಮಾಣಪತ್ರಗಳು ಪ್ರತಿ ವರ್ಷ, ಏಪ್ರಿಲ್ ತಿಂಗಳಲ್ಲಿ

33. ಮಧ್ಯಸ್ಥಿಕೆ ಪ್ರಕರಣಗಳ ದಾಖಲು, 3 ರಿಂದ 6 ಕ್ಕಿಂತ ಹೆಚ್ಚು ಕಂತುಗಳು ಮಿತಿಮೀರಿದವು, ಆಸ್ತಿಗಳ ಲಗತ್ತು ಪರಿಶೀಲಿಸಿ.

34. ಎನ್‌ಕ್ಯಾಶ್‌ಮೆಂಟ್‌ಗಾಗಿ ಕಳುಹಿಸಬೇಕಾದ ಚೆಕ್‌ಗಳು, ವಿಲೀನಗೊಂಡ ಬ್ಯಾಂಕ್‌ಗಳ ಪರಿಶೀಲನೆ ಚೆಕ್‌ಗಳು, 3 ತಿಂಗಳಿಗಿಂತ ಹೆಚ್ಚಿನ ದಿನಾಂಕದ ಚೆಕ್‌ಗಳು.

35. ಕೆಎಟಿ ಬೆಂಗಳೂರು/ಕರ್ನಾಟಕದ ಹೈಕೋರ್ಟ್‌ನಲ್ಲಿ ಬೆಂಗಳೂರು ಅಥವಾ ಧಾರವಾಡ ಅಥವಾ ಕಲಬುರ್ಗಿಯಲ್ಲಿ ಕೇವಿಯಟ್‌ಗಳನ್ನು ಸಲ್ಲಿಸಲು ವ್ಯವಸ್ಥೆ ಮಾಡಿ, ಪ್ರಶಸ್ತಿ ಮೊತ್ತವು 10 ಲಕ್ಷಕ್ಕಿಂತ ಹೆಚ್ಚು/ಸಾಲಗಾರ ಮತ್ತು ಸೂರೈಟ್‌ಗಳು ದಾವೆದಾರರಾಗಿದ್ದರೆ (ಕೆಎಟಿ ಬೆಂಗಳೂರಿನಲ್ಲಿ ಸಾಲಗಾರನಿಗೆ 25% ಠೇವಣಿ ಮೊತ್ತ ಕಡ್ಡಾಯವಾಗಿದೆ ಮೇಲ್ಮನವಿ ಸಲ್ಲಿಸಿ)

36. ತಡೆಯಾಜ್ಞೆ ನೀಡಿರುವ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ಎದುರಿಸಲು ತಕ್ಷಣ ಕ್ರಮ ಕೈಗೊಳ್ಳಿ

37. ವಿಭಜನಾ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ಸಿವಿಲ್ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಸಲ್ಲಿಸಿದರೆ, ಸುರಕ್ಷಿತ ಅಡಮಾನದ ಆಸ್ತಿ ಒಳಗೊಂಡಿದ್ದರೆ, ವಕೀಲರನ್ನು ಪ್ರತಿನಿಧಿಸಲು ವ್ಯವಸ್ಥೆಮಾಡಿ

38. "ಒಂದು ಬಾರಿ ಪರಿಹಾರ" ಯೋಜನೆಗೆ ಬೇಡ ಎಂದು ಹೇಳಿ.

---

.....28ನೇ ಪುಟದಿಂದ

ಸಂಸ್ಥೆಗಳು ಮುಂದುವರೆಯಬೇಕು.

– ಸಹಕಾರಿ ಅಸ್ಮಿತೆಯ ಬಗ್ಗೆ ಸಹಕಾರಿ ಸಂಸ್ಥೆಗಳು ಆಳವಾಗಿ ಅರ್ಥೈಸಿಕೊಂಡು ತಮ್ಮ ಮುಂದಿರುವ ಸವಾಲುಗಳನ್ನು ಎದುರಿಸಲು ಸಹಕಾರಿ ಸಂಸ್ಥೆಗಳು ಕೊಡುಗೆಯನ್ನು ನೀಡಬೇಕು.

– ಸಹಕಾರಿ ಅಸ್ಮಿತೆ ಹೇಳಿಕೆಯು ಸಹಕಾರಿ ಸಂಸ್ಥೆಗಳು ಅನುಸರಿಸಬೇಕಾದ ಮೂಲಭೂತ ಮಾನದಂಡಗಳನ್ನು ಸ್ಪಷ್ಟಪಡಿಸುತ್ತದೆ, ತಮ್ಮದೇ ಆದ ಪೂರಕ ಗುಣಲಕ್ಷಣಗಳನ್ನು ಹೊಂದಿರುವ ಈ ಮೂಲಭೂತ ಮಾನದಂಡಗಳಿಗೆ ಬದ್ಧವಾಗಿರುವ ಹೊಸ ರೀತಿಯ ಸಹಕಾರಿ ಸಂಸ್ಥೆಗಳನ್ನು ರಚಿಸಲು ಸುಲಭಗೊಳಿಸುತ್ತದೆ. ಸಹಕಾರಿ ಅಸ್ಮಿತೆ ಹೇಳಿಕೆಯಲ್ಲಿ ಪ್ರತಿಪಾದಿಸಲಾದ ಸಾಮಾನ್ಯ ಮಾನದಂಡಗಳು ಏಕತೆಯೊಳಗೆ ವೈವಿಧ್ಯತೆಯನ್ನು ಉತ್ತೇಜಿಸಿವೆ ಮತ್ತು ಸಹಕಾರದ ಮೂಲಕ ನಾಗರೀಕರು ತಮ್ಮ ಸಾಮಾನ್ಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಅನುವು ಮಾಡಿಕೊಡುತ್ತದೆ. ಈ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸಬೇಕು.

– ಹೊಸ ತಂತ್ರಜ್ಞಾನಗಳನ್ನು ಸಹಕಾರಿ ಸಂಸ್ಥೆಗಳು ತ್ವರಿತವಾಗಿ ಅಳವಡಿಸಿಕೊಂಡು ಕಾರ್ಯನಿರ್ವಹಿಸಬೇಕು.

– ಸಹಕಾರಿ ಬ್ರ್ಯಾಂಡ್ ಅನ್ನು ನಂಬಿಕೆಯ ಮೇಲೆ ಅಳವಡಿಸಲಾಗಿದೆ. ಸಹಕಾರ ಜಾಲವು ಬ್ರ್ಯಾಂಡ್ ಅನ್ನು ರಕ್ಷಿಸಬೇಕು.

**ಉಪಸಂಹಾರ :**

ಸಹಕಾರಿ ಸಂಸ್ಥೆಗಳು ತಮ್ಮ ಅಸ್ಮಿತೆಯ ಮೂಲಕ ಜಗತ್ತಿನಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸೂಕ್ತವಾದ ಮೌಲ್ಯಗಳು ಮತ್ತು ರಚನೆಗಳನ್ನು ಪ್ರಸ್ತುತಪಡಿಸುತ್ತವೆ. ಉತ್ತಮ ವ್ಯವಹಾರಗಳನ್ನು ಹೊಂದಲು ಈ ಅನುಕೂಲಗಳನ್ನು ಬಳಸಿಕೊಳ್ಳಬೇಕು, ಸುಸ್ಥಿರ ಅಭಿವೃದ್ಧಿಗೆ ವಿಶಾಲವಾದ ಅಗತ್ಯವನ್ನು ಮುನ್ನಡೆಸಬೇಕು. ಇಂದು ಎದುರಿಸುತ್ತಿರುವ ತೀವ್ರತರವಾದ ಆರ್ಥಿಕ, ಸಾಮಾಜಿಕ ಮತ್ತು ಪ್ರಾಕೃತಿಕ ಸವಾಲುಗಳನ್ನು ಸಹಕಾರಿ ಸಂಸ್ಥೆಗಳು ಎದುರಿಸುವಲ್ಲಿ, ಬಲವಾಗಿ ಚೇತರಿಸಿಕೊಳ್ಳಲು ಮತ್ತು ಪರಿಣಾಮಕಾರಿಯಾಗಿ ಉಳಿಯಲು ಸಹಕಾರಿ ಅಸ್ಮಿತೆಯು ಅಡಿಪಾಯವನ್ನು ಒದಗಿಸುತ್ತದೆ. ಹಾಗೆಯೇ, ಉತ್ತಮ ಜಗತ್ತನ್ನು ನಿರ್ಮಿಸಿ, ಮಾನವ ಅಭಿವೃದ್ಧಿ ಮತ್ತು ಪ್ರಾಕೃತಿಕ ಆರೈಕೆ ಕ್ರಿಯಾ ಯೋಜನೆಗಳಲ್ಲಿ ಮುಖ್ಯವಾಹಿನಿಗೆ ಬರಲು ಸಹಕಾರಿ ಸಂಸ್ಥೆಗಳಿಗೆ ಇದು ಉತ್ತಮ ಸಮಯ.

# ಪತ್ತಿನ ಚಟುವಟಿಕೆ ನಡೆಸುವ ಸಹಕಾರ ಸಂಸ್ಥೆಗಳ ಆದಾಯ ತೆರಿಗೆ ಕಡಿತಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯದ ಮಹತ್ವದ ತೀರ್ಪು

– ಶ್ರೀ ಶ್ರೀಕಾಂತ್ ಬರುವೆ, ಉಪ ಪ್ರಧಾನ ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಳಗಾವಿ.

ದೇಶದಲ್ಲಿನ ಪತ್ತಿನ ಚಟುವಟಿಕೆ ನಡೆಸುವ ಸಹಕಾರ ಸಂಸ್ಥೆಗಳನ್ನು 'ಬ್ಯಾಂಕು' ಅಥವಾ 'ಬ್ಯಾಂಕಿಂಗ್' ಚಟುವಟಿಕೆಯೆಂದು ಪರಿಗಣಿಸಿ ಈ ಹಿಂದೆ ಆದಾಯ ತೆರಿಗೆ ಇಲಾಖೆಯು ಆದಾಯ ತೆರಿಗೆ ಕಾಯ್ದೆ, 1961ರ ಕಲಂ 80ಪಿ(2)ರಡಿಯ ಕಡಿತದ ಸೌಲಭ್ಯವನ್ನು ನಿರಾಕರಿಸಿ ಆದೇಶವನ್ನು ಮಾಡುತ್ತಿತ್ತು.

ಆದರೆ ಪ್ರಸ್ತುತ ಗೌರವಾನ್ವಿತ ಸುಪ್ರೀಂ ಕೋರ್ಟ್, ಆದಾಯ ತೆರಿಗೆ ಕಾಯ್ದೆಯ ಕಲಂ 80ಪಿ (2) ಅಡಿಯಲ್ಲಿ ಪತ್ತಿನ ವ್ಯವಹಾರ ನಡೆಸುವ ಸಹಕಾರ ಸಂಸ್ಥಗಳನ್ನು ಬ್ಯಾಂಕ್‌ಗಳೆಂದು ಕರೆಯಲಾಗುವುದಿಲ್ಲ ಮತ್ತು ಗಳಿಸಿರುವ ಆದಾಯಕ್ಕೆ ಆದಾಯ ತೆರಿಗೆಯಿಂದ ಕಡತದ ಸೌಲಭ್ಯ ಪಡೆಯಲು ಅರ್ಹತೆ ಪಡೆಯುತ್ತದೆ ಎಂದು ಮಹತ್ವದ ತೀರ್ಪು ನೀಡಿದೆ. ಪತ್ತಿನ ವ್ಯವಹಾರ ನಡೆಸುವ ಸಹಕಾರ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತೆರಿಗೆ ಪ್ರಧಾನ ಆಯುಕ್ತರ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಸರ್ವೋಚ್ಚ ನ್ಯಾಯಾಲಯ ಸಿವಿಲ್ ಮೇಲ್ಮನವಿ ಸಂಖ್ಯೆ:8719/2022, ಸಿಐಟಿ ವಿರುದ್ದ ಅಣ್ಣಾಸಾಹೇಬ್ ಪಾಟೀಲ್ ಮಠಾಡಿ ಕಾಮಗಾರ್ ಸಹಕಾರಿ ಪಟೇದಿ ಲಿ., ಪ್ರಕರಣದಲ್ಲಿ ಸಹಕಾರ ಸಂಘಗಳು ಆದಾಯ ತೆರಿಗೆ ಕಾಯಿದೆ, 1961 ರ ಕಲಂ 80P(2) ರನ್ವಯ  ಗಳಿಸಿರುವ ಆದಾಯಕ್ಕೆ ಆದಾಯ ತೆರಿಗೆಯಿಂದ ಕಡತದ ಸೌಲಭ್ಯ ಅರ್ಹವಾಗಿವೆ ಎಂದು ಎಂದು ತೀರ್ಪನ್ನು ನೀಡುವುದರ ಮೂಲಕ ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗಳು ನಿಟ್ಟಿಸಿರು ಬಿಡುವಂತೆ ಮಾಡಿದೆ.

ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಸದಸ್ಯರಿಗೆ ಕೇವಲ ಸಾಲ ನೀಡುವುದನ್ನು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949ರ ನಿಬಂಧನೆಗಳ ಅಡಿಯಲ್ಲಿ ಸಹಕಾರಿ ಬ್ಯಾಂಕ್/ಬ್ಯಾಂಕ್‌ಗಳು ಎಂದು ಹೇಳಲಾಗುವುದಿಲ್ಲ ಎಂಬುದನ್ನು ಗಮನಿಸಿದೆ. ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ ಅಡಿಯಲ್ಲಿ ಬ್ಯಾಂಕಿಂಗ್ ಚಟುವಟಿಕೆಗಳು ಒಟ್ಟಾರೆಯಾಗಿವೆ ವಿಭಿನ್ನ ಚಟುವಟಿಕೆಗಳನ್ನು ನಡೆಸುತ್ತವೆ. ಆದರೆ ಕ್ರೆಡಿಟ್ ಸೊಸೈಟಿಗಳು ತಮ್ಮ ಸದಸ್ಯರಿಗೆ ಮಾತ್ರ ಸಾಲವನ್ನು ನೀಡುತ್ತವೆ. ಆದರೆ ಬ್ಯಾಂಕುಗಳು ಸಾರ್ವಜನಿಕರಿಗೆ ಸಾಲವನ್ನು ನೀಡುವುದನ್ನು ಒಳಗೊಂಡಂತೆ ಇತರೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುತ್ತವೆ. ಆದ್ದರಿಂದ ಕ್ರೆಡಿಟ್ ಸೊಸೈಟಿಗಳು ಮತ್ತು ಬ್ಯಾಂಕ್ಗಳ ನಡುವೆ ಅಪಾರ ವ್ಯತ್ಯಾಸವಿದೆ ಎಂದು ಹೇಳಿದೆ.

ಮುಂದುವರೆದು ತೀರ್ಪಿನಲ್ಲಿ CBDT ಸುತ್ತೋಲೆಗಳು ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯಡಿಯಲ್ಲಿ "ಬ್ಯಾಂಕ್" ನ ವ್ಯಾಖ್ಯಾನವನ್ನು ಪರಿಗಣಿಸಿ, ಅರ್ಹತೆಗಳ ಮೇಲೆಯೂ ಸಹ, ಸೆಕ್ಷನ್ 80P(4) ರ ನಿಬಂಧನೆಗಳು ಅಸೆಸ್ಸಿ ಮತ್ತು ಅಸೆಸ್ಸಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದೆ.

ಆದಾಯ ತೆರಿಗೆ ಕಡಿತಕ್ಕೆ ಸಂಬಂಧಿಸಿದ ಹಲವು ಪ್ರಕರಣಗಳು ದೇಶದ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿವೆ. ಆ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ತೀರ್ಪು ದೇಶದ ಎಲ್ಲಾ ಕ್ರೆಡಿಟ್ ಕೋ–ಆಪ್‌ಗಳಿಗೆ ಅನ್ವಯಿಸುತ್ತದೆ.

## ಆದಾಯ ತೆರಿಗೆ : ಸುಪ್ರೀಮ್ ಕೋರ್ಟ್ ಮಹತ್ವದ ತೀರ್ಪು

## ಕ್ರೆಡಿಟ್ ಸಹಕಾರಿ ಸಂಸ್ಥೆಗಳು ಬ್ಯಾಂಕುಗಳಲ್ಲ. ತೆರಿಗೆ ವಿನಾಯಿತಿ ಪಡೆಯಲು ಅರ್ಹರು.

ದೇಶದ ಸಹಸ್ರಾರು ಕ್ರೆಡಿಟ್ ಸಂಸ್ಥೆಗಳು ಅನೇಕ ವರ್ಷಗಳಿಂದ ಅನುಭವಿಸುತಿದ್ದ ಆದಾಯ ತೆರಿಗೆ ಪಾವತಿಸುವ ಬಾಧೆಗೆ  ಸುಪ್ರೀಮ್ ಕೋರ್ಟ ತೆರೆ ಎಳೆದಿದೆ. ಸಹಕಾರಿ ಕ್ರೆಡಿಟ್ ಸಹಕಾರಿ ಸಂಸ್ಥೆಗಳು ತನ್ನ ಸದಸ್ಯ ರೊಡನೆ ಉಳಿತಾಯ ಮನೋಭಾವ ಬೆಳೆಸುವ ದೃಷ್ಟಿಯಿಂದ ಠೇವಣಿ ಸಂಗ್ರಹಣೆ ಹಾಗೂ ಸಾಲ ನೀಡುವ ಕಾರ್ಯನಿರ್ವಹಿಸುವುದರಿಂದ ಅವುಗಳನ್ನು ಬ್ಯಾಂಕುಗಳೆಂದು ಹೇಳಲು ಸಾಧ್ಯವಿಲ್ಲ. ಅವರುಗಳು ಸೇವಾ ಮನೋಭಾವದಿಂದ ಸೇವೆ ಮಾಡುವ ಸಹಕಾರಿ ಸಂಸ್ಥೆಗಳಾಗಿವೆ. ಆದ್ದರಿಂದ ಅವರು ಆದಾಯ ತೆರಿಗೆ ಕಾಯ್ದೆ 80(ಪಿ)(2) ಅಡಿಯಲ್ಲಿ ವಿನಾಯಿತಿ ಪಡೆಯಲು ಅರ್ಹರಾಗಿದ್ದಾರೆ ಎಂದು ಮಹತ್ವದ ತೀರ್ಪುನೀಡಿರುವುದನ್ನು ದೇಶದಾದ್ಯಂತ ಸಹಕಾರಿ ಗಣ್ಯರು ಸ್ವಾಗತಿಸಿದ್ದಾರೆ.

ಅನೇಕ ವರ್ಷಗಳಿಂದ ಸಹಕಾರಿ ಮುಖಂಡರುಗಳು ಸಹಕಾರ ಭಾರತಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ರಾಷ್ಟ್ರೀಯ ಸಹಕಾರ ಯೂನಿಯನ್ ಹಾಗೂ ಅನೇಕ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸರಕಾರದ ಗಮನ ಸೆಳೆಯಲಾಗಿತ್ತು. ಕೇಂದ್ರ ಹಣಕಾಸು ಸಚಿವರಿಗೆ ಮನವಿಗಳನ್ನು ಕೇಂದ್ರ ನೇರ ತೆರಿಗೆ ಮಂಡಳಿಗೆ ಮನವಿಗಳನ್ನು ಸಲ್ಲಿಸಲಾಗಿತ್ತು. ಅನೇಕ ಸಹಕಾರಿ ಸಂಸ್ಥೆಗಳು ಹೈಕೋರ್ಟ್ ಹಾಗೂ ವಿವಿಧ ಕೋರ್ಟಗಳ ಮೂಲಕ ವಿನಾಯಿತಿಗೆ ಅರ್ಹತೆಯನ್ನು ಪಡೆದುಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

**ನೂತನ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರಿಗೆ, ಉಪಮುಖ್ಯಮಂತ್ರಿ ಶ್ರೀ ಡಿ.ಕೆ ಶಿವಕುಮಾರರವರಿಗೆ, ನೂತನ ಸಹಕಾರ ಸಚಿವ ಶ್ರೀ ಕೆ. ಎನ್ ರಾಜಣ್ಣನವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಹೃತ್ಪೂರ್ವಕ ಅಭಿನಂದನೆ ಕೋರುವ.**




ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003